ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಸೆಪ್ಟೆಂಬರ್ 27, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 135 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಭದ್ರಾ ನಾಲೆಗಳಿಗೆ ನೀರು ಬಿಡುಗಡೆ

ಶಿವಮೊಗ್ಗ, ಸೆ. 26- ಭದ್ರಾ ಜಲಾಶಯದ ಮುಂಗಾರು ಬೆಳೆಗಳಿಗೆ ಬಲದಂಡೆ ಹಾಗೂ ಎಡದಂಡೆ ನಾಲೆಗಳಿಗೆ ನೀರನ್ನು ಸರದಿಯನ್ವಯ ಹರಿಸಲಾಗುವುದು ಎಂದು ಕ.ನೀ.ನಿ.ನಿ ಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ಹಾಗೂ ಭದ್ರಾ ಯೋಜನಾ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ಸುಜಾತ ತಿಳಿಸಿದ್ದಾರೆ.

ಭದ್ರಾ ಬಲದಂಡೆ ನಾಲೆಗಳಿಗೆ ಸೆಪ್ಟೆಂಬರ್ 26 ರ ಮಂಗಳವಾರ ರಾತ್ರಿಯಿಂದ ಅಕ್ಟೋಬರ್ 15 ರವರೆಗೆ ಒಟ್ಟು 20 ದಿನ ನೀರು ಹರಿಸಲಾಗುವುದು. ನಂತರ ಮತ್ತೆ 10 ದಿವಸ ನಾಲೆಯಲ್ಲಿ ನೀರು ಬಂದ್ ಮಾಡಿ ಅಕ್ಟೋಬರ್ 26 ರಿಂದ ನವೆಂಬರ್ 17 ರವರೆಗೆ ಒಟ್ಟು 23 ದಿನಗಳ ಕಾಲ ನೀರನ್ನು ಹರಿಸಲಾಗುವುದು.

ಭದ್ರಾ ಎಡದಂಡೆ ನಾಲೆಗಳಿಗೆ ಈಗಾಗಲೇ ನೀರನ್ನು ಹರಿಸಲಾಗಿದ್ದು, ಅಕ್ಟೋಬರ್ 1 ರವರೆಗೆ ಒಟ್ಟು 15 ದಿನ ನೀರನ್ನು ಹರಿಸಲಾಗುತ್ತದೆ. ನಂತರ 10 ದಿವಸ ನಾಲೆಯಲ್ಲಿ ನೀರು ಬಂದ್ ಮಾಡಿ ಅಕ್ಟೋಬರ್ 12 ರಿಂದ 26 ರವರೆಗೆ ಒಟ್ಟು 15 ದಿನಗಳು ನೀರು ಹರಿಸಿ, ಪುನಃ 10 ದಿವಸ ಬಂದ್ ಮಾಡಿ, ನವೆಂಬರ್ 6 ರಿಂದ 17 ರವರೆಗೆ ಒಟ್ಟು 12 ದಿನಗಳ ಕಾಲ ನೀರನ್ನು ಹರಿಸಲಾಗುವುದೆಂದು ಸುಜಾತ ಅವರು ತಿಳಿಸಿದ್ದಾರೆ.

### ಜಿಲ್ಲೆಯ ರೈತರನ್ನು ಮೂರ್ಖರನ್ನಾಗಿಸುವ ತಂತ್ರ

ದಾವಣಗೆರೆ, ಸೆ. 27- ಇಂದಿನಿಂದ ಭದ್ರಾ ನಾಲೆಗಳಲ್ಲಿ ನೀರು ಹರಿಸುವುದಾಗಿ ಭದ್ರಾ ನೀರಾವರಿ ಸಲಹಾ ಸಮಿತಿ ಕಾರ್ಯದರ್ಶಿ ಸುಜಾತ ಹೇಳಿದ್ದಾರೆ.

ಇದು ಆಫ್ ಅಂಡ್ ಆನ್ ಪದ್ಧತಿಯಾಗಿದೆ. ಇದರಲ್ಲಿ ಯಾವ ಬದಲಾವಣೆ ಮಾಡಲಾಗಿಲ್ಲ. ರೈತರನ್ನು ಮೂರ್ಖರನ್ನಾಗಿಸುವ ತಂತ್ರ ಎಂದು ರೈತ ಮುಖಂಡರಾದ ಕೊಳೇನಹಳ್ಳಿ ಬಿ.ಎಂ. ಸತೀಶ್ ಮತ್ತು ಬೆಳವನೂರು ನಾಗೇಶ್ವರರಾವ್ ಹೇಳಿದ್ದಾರೆ.

ನಮಗೆ ಆಫ್ ಅಂಡ್ ಆನ್ ಪದ್ಧತಿ ಬೇಡ. ಹಿಂದಿನ ಆದೇಶದಂತೆ ನಿರಂತರ 100 ದಿನ ನೀರು ಹರಿಸಬೇಕು. (4ನೇ ಪುಟಕ್ಕೆ)

## 18 ದಿನ ಮೂರು ಸಾವಿರ ಕ್ಯೂಸೆಕ್ಸ್ ನೀರು

**ರಾಜ್ಯಕ್ಕೆ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ**

ಬೆಂಗಳೂರು, ಸೆ. 26 - ತಮಿಳುನಾಡಿಗೆ ಮತ್ತೆ 18 ದಿನಗಳ ಕಾಲ ಪ್ರತಿನಿತ್ಯ ಮೂರು ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಕರ್ನಾಟಕಕ್ಕೆ ಆದೇಶ ಮಾಡಿದೆ.

ನೀರು ಹರಿಸುವುದನ್ನು ವಿರೋಧಿಸಿ ರಾಜ್ಯಾದ್ಯಂತ ರೈತರು ಮತ್ತು ವಿವಿಧ ಸಂಘಟನೆಗಳು ಪ್ರತಿಭಟನೆ, ಧರಣಿ, ಬಂದ್ ನಡೆಸುತ್ತಿದ್ದರೂ ಅದನ್ನು ಲೆಕ್ಕಿಸದೇ ನಿಯಂತ್ರಣ ಸಮಿತಿಯ ಇಂದಿನ ಸಭೆಯಲ್ಲಿ ಈ ಆದೇಶ ಮಾಡಿದೆ. ನಿಯಂತ್ರಣ ಸಮಿತಿ ಮಾಡಿರುವ ಆದೇಶ ಇದೇ 28ರ ಬೆಳಿಗ್ಗೆ 8 ಗಂಟೆಯಿಂದ ಆರಂಭವಾಗಿ ಅಕ್ಟೋಬರ್ 15ರವರೆಗೂ ಪ್ರತಿನಿತ್ಯ ಈ ಪ್ರಮಾಣದ ನೀರನ್ನು ಬಿಳಿಗುಂಡ್ಲು ಮಾಪನದಲ್ಲಿ ದಾಖಲಾಗುವಂತೆ ಹರಿಸಬೇಕಾಗಿದೆ.

ಮುಂಗಾರು ಮಳೆ ಕೊರತೆಯಿಂದ ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆ ಶೇ.53.04ರಷ್ಟಿದೆ. ನಮಗೆ ಅಗತ್ಯ ಪ್ರಮಾಣದ ನೀರಿಲ್ಲ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತೊಂದರೆಯಾಗಲಿದೆ. ಇನ್ನು ಮುಂದೆ ಯಾವುದೇ ಕಾರಣಕ್ಕೂ ನೀರು ಹರಿಸಲು ಸಾಧ್ಯವಿಲ್ಲ ಎಂದು ನಮ್ಮ ಅಧಿಕಾರಿಗಳು ವಾಸ್ತವಾಂಶ ಬಿಚ್ಚಿಟ್ಟರೂ ಕಳೆದ ಆದೇಶದಲ್ಲಿ 2 ಸಾವಿರ ಕ್ಯೂಸೆಕ್ಸ್ ಕಡಿಮೆ (4ನೇ ಪುಟಕ್ಕೆ)

## ವಹಿದಾ ರೆಹಮಾನ್‌ಗೆ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ



ನವದೆಹಲಿ, ಸೆ. 26 – ಹಿಂದಿ ಚಲನಚಿತ್ರ ನಟಿ ವಹಿದಾ ರೆಹಮಾನ್ ಅವರಿಗೆ 'ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿ ಪ್ರಕಟಿಸಲಾಗಿದೆ. 68 ವರ್ಷಗಳ ಹಿಂದೆ ಅವರು ಚಿತ್ರರಂಗಕ್ಕೆ ಕಾಲಿರಿಸಿದ್ದರು. 'ಪ್ಯಾಸಾ' ಹಾಗೂ 'ಗೈಡ್' ಅವರಿಗೆ ಹೆಸರು ತಂದು ಕೊಟ್ಟ ಚಿತ್ರಗಳಾಗಿವೆ.

ಹಿರಿಯ ನಟ ದೇವ್ ಆನಂದ್ ಅವರ ಜನ್ಮದಿನದಂದೇ ದಾದಾ ಸಾಹೇಬ್ ಪ್ರಶಸ್ತಿ ಸಿಕ್ಕಿರುವುದು ದುಪ್ಪಟ್ಟು ಸಂತೋಷ ತಂದಿದೆ. ಈ ಕೊಡುಗೆ ಅವರಿಗೆ ಸಲ್ಲಬೇಕಿತ್ತು, ನನಗೆ ಬಂದಿದೆ ಎಂದು ವಹಿದಾ ಹೇಳಿದ್ದಾರೆ.

ವಹಿದಾ ರೆಹಮಾನ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಜೀವಮಾನದ ಸಾಧನೆ ಪ್ರಶಸ್ತಿ ನೀಡುವುದನ್ನು ಕೇಂದ್ರ ಮಾಹಿತಿ (4ನೇ ಪುಟಕ್ಕೆ)




## ವೀರಶೈವ ಒಳಪಂಗಡಗಳಿಗೆ ಓಬಿಸಿ ಲಾಭಕರ

### ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಮತ

ದಾವಣಗೆರೆ, ಸೆ. 26- ಪ್ರತ್ಯೇಕ ಧರ್ಮದ ಮಾನ್ಯತೆ ಪಡೆದುಕೊಳ್ಳುವುದಕ್ಕಿಂತ ಕೇಂದ್ರದ ಓಬಿಸಿ ಸ್ಥಾನ ಪಡೆದುಕೊಳ್ಳುವುದು ವೀರಶೈವ ಲಿಂಗಾಯತ ಧರ್ಮದ ಒಳಪಂಗಡಗಳಿಗೆ ಹೆಚ್ಚು ಲಾಭಕರವಾಗಲಿದೆ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ ಇಂದು ಆಯೋಜನೆಗೊಂಡಿದ್ದ ಶ್ರೀಶೈಲ ಜಗದ್ಗುರು ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿಯವರ 37 ನೇ ಪುಣ್ಯಾರಾಧನೆ ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ 12 ವರ್ಷದ ಸ್ಮರಣೋತ್ಸವ, ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ದ್ವಾದಶ ಪೀಠಾರೋಹಣ ವರ್ಧಂತಿ ಮಹೋತ್ಸವ ಹಾಗೂ ಜನ ಜಾಗೃತಿ ಧರ್ಮ ಸಮ್ಮೇಳನದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ವೀರಶೈವ ಲಿಂಗಾಯತ ಧರ್ಮದ ಎಲ್ಲಾ ಒಳಪಂಗಡಗಳನ್ನು ಸೇರಿಸುವುದಕ್ಕಾಗಿ ಎಲ್ಲಾ ಮಠಾಧೀಶರು ಸರ್ಕಾರವನ್ನು ಆಗ್ರಹಿಸುವ ಹೋರಾಟ ಮಾಡುತ್ತಿರುವುದಾಗಿ ತಿಳಿಸಿದರು.

ಪ್ರತ್ಯೇಕ ಧರ್ಮದವರಿಗೆ ಶೇ. 4.5 ಮೀಸಲಾತಿ ಇದ್ದರೆ, ಓಬಿಸಿಯವರಿಗೆ 22.5 ಮೀಸಲಾತಿ ಇದೆ. ಆದರೆ ಧರ್ಮದ ಮಾನ್ಯತೆಗಿಂತ ಕೇಂದ್ರದ ಓಬಿಸಿ ಮೀಸಲಾತಿ ಪಡೆಯುವುದು ಅವಶ್ಯ ಎಂದರು.

ಸಮಾಜದ ಎಲ್ಲಾ ಪಂಗಡಗಳಿಗೂ ಇದನ್ನು ನೀಡಬೇಕೆಂಬ ಆಗ್ರಹವಿರುವ ಕಾರಣ ತನ್ಮೂಲಕ ಸಮಾಜದ ಸಂಘಟನೆ ಸಹ ಸಾಧ್ಯವಾಗುತ್ತದೆ ಎಂಬುದು ನಮ್ಮ ಭಾವನೆ. ಮೀಸಲಾತಿ ಹೋರಾಟಕ್ಕೆ ಸಮಾಜದ ಎಲ್ಲರೂ ಕೈಜೋಡಿಸಬೇಕೆಂದು ಕರೆ ನೀಡಿದರು.

ಶ್ರೀಶೈಲ ಪೀಠದ ಸರ್ವಾಂಗೀಣ ವಿಕಾಸಕ್ಕೆ ಭದ್ರ ಬುನಾದಿ ಹಾಕಿ, ಧರ್ಮಪೀಠ, ಸಮಾಜಗಳನ್ನು ವಿಕಾಸಗೊಳಿಸಿದವರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳ ನಂತರ ಅನೇಕ ದಶಕಗಳವರೆಗೆ ಸಮಾಜಕ್ಕೆ ಧರ್ಮದ ಮಾರ್ಗದರ್ಶನ ಮಾಡುವ ಜೊತೆಗೆ ಪೀಠದ ಅಂಗ ಸಂಸ್ಥೆ ಮತ್ತು ಶಾಖಾ ಮಠಗಳನ್ನು ಬೆಳೆಸಿದವರು ಉಮಾಪತಿ ಪಂಡಿತಾರಾಧ್ಯ ಶ್ರೀಗಳು ಎಂದರು.

ಸನಾತನ ವೀರಶೈವ ಲಿಂಗಾಯತ ಧರ್ಮಕ್ಕೆ ತನ್ನದೇ ಆದ ವಿಶಿಷ್ಟವಾದ ಆದಿ ಗುರುಪರಂಪರೆ ಇದೇ. ಗುರು ಮತ್ತು ವಿರಕ್ತ ಎಂಬುದಾಗಿ ಮೇಲ್ನೋಟಕ್ಕೆ ಈ ಪರಂಪರೆ ಎರಡು ವಿಧವಾಗಿ ಗೋಚರಿಸುತ್ತವೆ. ಕೆಲವು ಸಣ್ಣಪುಟ್ಟ ವ್ಯತ್ಯಾಸಗಳನ್ನು ಹೊರತುಪಡಿಸಿದರೆ. ಈ ಎರಡೂ ಪರಂಪರೆಗಳ ತತ್ವ, ಸಿದ್ಧಾಂತ, ಆಚರಣೆ ಮತ್ತು ಉದ್ದೇಶಗಳು ಒಂದೇ ಆಗಿರುವುದರಿಂದ ಗುರು ಮತ್ತು ವಿರಕ್ತ ಪರಂಪರೆಗಳು ಈ ಧರ್ಮದ ಎರಡು (2ನೇ ಪುಟಕ್ಕೆ)

### ಜಿಲ್ಲೆಯಲ್ಲಿ 3 ತಿಂಗಳಿಗೊಮ್ಮೆ ಉದ್ಯೋಗ ಮೇಳ

ದಾವಣಗೆರೆ ಜಿಲ್ಲೆಯಲ್ಲಿ ಮೂರು ತಿಂಗಳಿಗೊಮ್ಮೆ ಉದ್ಯೋಗ ಮೇಳ ಮಾಡುವ ಮೂಲಕ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ಸಹಕಾರಿಯಾಗುತ್ತದೆ. ನಿರುದ್ಯೋಗ ನಿವಾರಣೆಯಾದರೆ ದೇಶ ಸಮೃದ್ಧಿಯಾಗಿ ಇರಲು ಸಾಧ್ಯವಾಗುತ್ತದೆ.



ಹೈನುಗಾರಿಕೆಗೆ ಉತ್ತೇಜನ ನೀಡುವ ಸಲುವಾಗಿ ನಮ್ಮ ಸರ್ಕಾರ ಹಸು, ಎಮ್ಮೆ ಸಾಕಾಣಿಕೆಗೆ ಸಹಾಯ ಧನ ನೀಡುತ್ತಿದೆ. ಇದರಿಂದ ಸ್ವಯಂ ಉದ್ಯೋಗಕ್ಕೆ ಅನುಕೂಲವಾಗಲಿದೆ.

ಇನ್ನೂ ಹೆಚ್ಚು ಹೆಚ್ಚು ಕೆಲಸ ಮಾಡೋಣ. ಶಿಕ್ಷಣ, ಉದ್ಯೋಗ, ಆರೋಗ್ಯ ಸೇರಿ ಮೂಲ ಸೌಕರ್ಯಗಳನ್ನು ಕಲ್ಪಿಸುವುದು ಸರ್ಕಾರ ಮತ್ತು ಜನಪ್ರತಿನಿಧಿಗಳು ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರೂ ಸಹ ಎಸ್.ಎಸ್. ಕೇರ್ ಟ್ರಸ್ಟ್ ಮೂಲಕ ಉತ್ತಮ ಕೆಲಸ ಮಾಡುತ್ತಿದ್ದಾರೆ.

**- ಶಾಮನೂರು ಮಲ್ಲಿಕಾರ್ಜುನ್,**
**ಜಿಲ್ಲಾ ಉಸ್ತುವಾರಿ ಸಚಿವರು**





## ವಿನೋಬನಗರ ಗಣಪತಿ ಮೂರ್ತಿಯ ಅದ್ಧೂರಿ ಮೆರವಣಿಗೆ

**ಟ್ರ್ಯಾಕ್ಟರ್ ಚಲಾಯಿಸಿ ಮೆರವಣಿಗೆಗೆ ಚಾಲನೆ ನೀಡಿದ ಸಚಿವ ಎಸ್ಸೆಸ್ಸೆಂ, ಮೆರವಣಿಗೆಗೆ ಕಲಾ ತಂಡಗಳ ಮೆರಗು**

ದಾವಣಗೆರೆ, ಸೆ.26- ಇಲ್ಲಿನ ವಿನೋಬನಗರದಲ್ಲಿ ಶ್ರೀ ವೀರ ವರಸಿದ್ಧಿ ವಿನಾಯಕ ಸೇವಾ ಸಮಿತಿಯಿಂದ 31ನೇ ವರ್ಷದ ಗಣೇಶ ಮಹೋತ್ಸವದ ಅಂಗವಾಗಿ ಪ್ರತಿಷ್ಠಾಪಿಸಲಾಗಿದ್ದ ಗಣಪತಿ ಮೂರ್ತಿ ವಿಸರ್ಜನೆ ಮಂಗಳವಾರ ಅದ್ಧೂರಿಯಾಗಿ ನೆರವೇರಿತು.

ಮಧ್ಯಾಹ್ನ 2.40ರ ಸುಮಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಗಣೇಶಮೂರ್ತಿಯ ಭವ್ಯ ಮೆರವಣಿಗೆಗೆ ಚಾಲನೆ ನೀಡಿದರು. ಗಣೇಶನ ವಿಗ್ರಹವಿದ್ದ ಟ್ರ್ಯಾಕ್ಟರ್ ಚಲಾಯಿಸಿ ಸಚಿವರು ಗಮನ ಸೆಳೆದರು.

ಮೆರವಣಿಗೆ ಸಂದರ್ಭದಲ್ಲಿ ಮಾತನಾಡಿದ ಸಚಿವ ಎಸ್ಸೆಸ್ಸೆಂ, ಕಳೆದ 28 ವರ್ಷಗಳಿಂದಲೂ ಇಲ್ಲಿನ ಗಣೇಶೋತ್ಸವಕ್ಕೆ ಬರುತ್ತಿದ್ದೇನೆ. 1995ರಿಂದಲೂ ಟ್ರ್ಯಾಕ್ಟರ್ ಓಡಿಸುವ ಮೂಲಕ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತೇನೆ ಎಂದರು. (4ನೇ ಪುಟಕ್ಕೆ)

## 'ಗಾಂಧಿ ಗ್ರಾಮ'ಕ್ಕೆ ಜಿಲ್ಲೆಯ 6 ಗ್ರಾ.ಪಂ. ಆಯ್ಕೆ

ದಾವಣಗೆರೆ, ಸೆ. 26 - ರಾಜ್ಯ ಸರ್ಕಾರವು 2022-23ನೇ ಸಾಲಿನ 'ಗಾಂಧಿ ಗ್ರಾಮ ಪುರಸ್ಕಾರ' ಮತ್ತು 'ವಿಶೇಷ ಗಾಂಧಿ ಗ್ರಾಮ ಪುರಸ್ಕಾರ' ಕ್ಕೆ ರಾಜ್ಯದ 31 ಜಿಲ್ಲೆಗಳ 237 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿದೆ. ಗಾಂಧಿ ಗ್ರಾಮ ಪುರಸ್ಕಾರಕ್ಕೆ 233 ಗ್ರಾ.ಪಂ. ಮತ್ತು ವಿಶೇಷ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಕುಂದಾಪುರ ತಾ. ಹೊಸಾಡು, ಉಡುಪಿ ತಾ. 80 ಬಡಗ ಬೆಟ್ಟು, ಹಳಿಯಾಳ ತಾ. ತಟ್ಟೀಗೇರಿ ಹಾಗೂ ಬೆಳವಟಿಗೆ ಗ್ರಾ.ಪಂ.ಗಳು ಆಯ್ಕೆಯಾಗಿವೆ. ದಾವಣಗೆರೆ ತಾಲ್ಲೂಕಿನ ಮುದಹದಡಿ, ಹರಿಹರ ತಾಲ್ಲೂಕಿನ ಜಿಗಳಿ, ಚನ್ನಗಿರಿ ತಾಲ್ಲೂಕಿನ ಹಿರೇಮಳಲಿ, ಹೊನ್ನಾಳಿ ತಾಲ್ಲೂಕಿನ ರಾಂಪುರ ಮತ್ತು ನ್ಯಾಮತಿ ತಾಲ್ಲೂಕಿನ ಚಿ. ಕಡದಕಟ್ಟೆ, ಜಗಳೂರು ತಾಲ್ಲೂಕಿನ ಸೊಕ್ಕೆ ಗ್ರಾ.ಪಂ.ಗಳನ್ನು 'ಗಾಂಧಿ ಗ್ರಾಮ ಪುರಸ್ಕಾರಕ್ಕೆ' ಆಯ್ಕೆ ಮಾಡಲಾಗಿದೆ. ಅ. 12ರಂದು ವಿಧಾನಸೌಧದಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ನಿವೃತ್ತ ಪ್ರಾಧ್ಯಾಪಕ ಟಿ. ಮಹೇಶ್ವರಪ್ಪ ನಿಧನ



ಜನನ : 16-06-1951

ನಿಧನ : 25-09-2023

ಸಿರಿಗೆರೆ ತರಳಬಾಳು ಬೃಹನ್ಮಠದ ವಿದ್ಯಾಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರಾದ

**ಶ್ರೀ ಟಿ. ಮಹೇಶ್ವರಪ್ಪ** ಅವರು

ದಿನಾಂಕ 25-09-2023ರ ಸೋಮವಾರ ಸಂಜೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 74 ವರ್ಷ ವಯಸ್ಸಾಗಿತ್ತು.

ಕೇದಾರನಾಥ ದರ್ಶನ ಪಡೆದು, ಗುಪ್ತಕಾಶಿಗೆ ಆಗಮಿಸಿದ ಸಂದರ್ಭದಲ್ಲಿ ನಿಧನರಾದ ಶ್ರೀಯುತರ ಪಾರ್ಥಿವ ಶರೀರವನ್ನು ದಿನಾಂಕ 27-09-2023ರ ಬುಧವಾರ ಮಧ್ಯಾಹ್ನ ದಾವಣಗೆರೆಗೆ ತರಲಾಗುತ್ತದೆ. ನಂತರ, ಮಧ್ಯಾಹ್ನ 4 ಗಂಟೆಯಿಂದ ತರಳಬಾಳು ಬಡಾವಣೆ 12ನೇ ತಿರುವಿನಲ್ಲಿರುವ ಮೃತರ ಸ್ವಗೃಹದಲ್ಲಿ ಪಾರ್ಥಿವ ಶರೀರವನ್ನು ಇರಿಸಲಾಗುವುದು.

ದಿನಾಂಕ 28-09-2023ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಮೃತರ ಸ್ವಗ್ರಾಮ ತರೀಕೆರೆ ತಾಲ್ಲೂಕಿನ ಕುಡ್ಲೂರು ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಧರ್ಮಪತ್ನಿ : ಶ್ರೀಮತಿ ಭಾಗ್ಯಮ್ಮ ಮಹೇಶ್ವರಪ್ಪ
ಮಗ-ಸೊಸೆ : ಡಾ|| ಸುಧೀರ್ ಕೆ.ಎಂ. ಮತ್ತು ಶ್ರೀಮತಿ ಡಾ|| ಚೈತ್ರ ಎನ್.ಟಿ.
ಮಗಳು-ಅಳಿಯ : ಶ್ರೀಮತಿ ಸುಷ್ಮಾ ಕೆ.ಎಂ. ಮತ್ತು ಪ್ರಕಾಶ್ ಸಿ.ಎಂ. ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು ಮೊ. : 72047 23987, 97409 84864

### ಕೊಲೀಜಿಯಂ ಶಿಫಾರಸ್ಸು ವಿಳಂಬಕ್ಕೆ ಆಕ್ಷೇಪ

ನವದೆಹಲಿ, ಸೆ. 26 – ನ್ಯಾಯಮೂರ್ತಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಕೊಲೀಜಿಯಂ ಕಳಿಸಿದ 70 ಶಿಫಾರಸ್ಸುಗಳು ವಿಳಂಬವಾಗಿರುವ ಬಗ್ಗೆ ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಬಳಿ ಪ್ರಸ್ತಾಪಿಸಿದ್ದು, ಸರ್ಕಾರದ ಬಳಿ ಚರ್ಚಿಸುವಂತೆ ತಿಳಿಸಿದೆ. ಕಳೆದ ವಾರದವರೆಗೆ 80 ಶಿಫಾರಸ್ಸುಗಳು ಬಾಕಿ ಇದ್ದವು. ಹತ್ತು ಹೆಸರುಗಳಿಗೆ ಅನುಮೋದನೆ ನೀಡಲಾಗಿದೆ. ಈಗ 70 ಬಾಕಿ ಇವೆ. ಕೆಲ ಶಿಫಾರಸ್ಸುಗಳು ಕಳೆದ ವರ್ಷದ ನವೆಂಬರ್‌ನಿಂದಲೂ ಬಾಕಿ ಇವೆ ಎಂದು ನ್ಯಾಯಾಲಯ ಹೇಳಿದೆ.

### ವಿಶ್ವಸಂಸ್ಥೆಯಲ್ಲೂ 'ಭಾರತ' ಪದದ ಬಳಕೆ

ವಿಶ್ವಸಂಸ್ಥೆ, ಸೆ. 26 – ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು 'ಇಂಡಿಯಾ' ಬದಲು (4ನೇ ಪುಟಕ್ಕೆ)

**ಪೋಷಕರಿಗೆ ಒಂದು ಸಿಹಿ ಸುದ್ದಿ**

ನಿಮ್ಮ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರಾ?
ಅವರಿಗೆ ಹೋಂ ವರ್ಕ್ಸ್ ಮಾಡಿಸಲು ಕಷ್ಟವಾಗುತ್ತಿದೆಯಾ?
ತಮಗೆ ವೈಯಕ್ತಿಕ ಕಾಳಜಿ ವಹಿಸಲು ಕಷ್ಟವಾಗುತ್ತಿದೆಯಾ?
ಅವರಿಗೆ ಜ್ಞಾಪಕ ಶಕ್ತಿ ಕೊರತೆ ಇದೆಯಾ?


**ಮೇಲಿನ ಎಲ್ಲಾ ಸಮಸ್ಯೆಗಳಿಗೆ ನಮ್ಮಲ್ಲಿ ಪರಿಹಾರವಿದೆ.**

6 ರಿಂದ 10 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ವಿಶೇಷ ತರಬೇತಿ ನೀಡುವ ಉದ್ದೇಶದಿಂದ **ಸಂಸ್ಕಾರ ವಿದ್ಯಾಲಯವನ್ನು** ಪ್ರಾರಂಭ ಮಾಡಿದ್ದೇವೆ. ಪಠ್ಯಾಧಾರಿತ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣವನ್ನು ನೀಡಲಾಗುತ್ತದೆ.

ಆಸಕ್ತಿ ಇದ್ದವರು ಸಂಪರ್ಕಿಸಲು ಕೋರಲಾಗಿದೆ.

ದೂರವಾಣಿ ಸಂಖ್ಯೆ : 76769 82714

## ಹತ್ತನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಡಿ.ಎನ್. ಶೇಖರಪ್ಪ ಚಿಕ್ಕನಹಳ್ಳಿ**

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

ಶ್ರೀಮತಿ ಗಂಗಮ್ಮ ಶೇಖರಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

# ಶಾಪ ಗ್ರಸ್ತ ಹಬ್ಬಗಳ ಆಚರಣೆ ಕೈಬಿಡಿ



## ಬೆಳ್ಳೂಡಿ ಮಠದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಹಿಂದುಳಿದ ಜನರಿಗೆ ಕಾಗಿನೆಲೆ ಶ್ರೀಗಳ ಕಿವಿಮಾತು

ಮಲೇಬೆನ್ನೂರು, ಸೆ. 26 - ಶಾಪ ಗ್ರಸ್ತ ಹಬ್ಬಗಳ ಆಚರಣೆ ಬಿಟ್ಟು, ಆ ಹಣವನ್ನು ಮಕ್ಕಳ ಶಿಕ್ಷಣಕ್ಕೆ ಖರ್ಚು ಮಾಡಿದರೆ ಮುಂದೆ ಅವರಿಂದ ನಿಮ್ಮ ಮನೆಗೆ ಮಾತ್ರವಲ್ಲ, ಸಮಾಜಕ್ಕೆ ಒಳ್ಳೆಯದಾಗುತ್ತದೆ ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಹಿಂದುಳಿದ ಸಮಾಜದವರಿಗೆ ಕಿವಿ ಮಾತು ಹೇಳಿದರು.

ಬೆಳ್ಳೂಡಿ ಶಾಖಾ ಮಠದ ಸಮುದಾಯ ಭವನದಲ್ಲಿ ಹರಿಹರ ತಾಲ್ಲೂಕು ಕನಕ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸತ್ತವರ ಹೆಸರಿನಲ್ಲಿ ಕುರಿ ಕಡಿದು ಹಬ್ಬ ಆಚರಿಸುವುದರಿಂದ ಏನು ಪ್ರಯೋಜನ ಎಂದು ಪ್ರಶ್ನಿಸಿದ ಶ್ರೀಗಳು, ನಾವು ಮಾಂಸಾಹಾರಿ ವಿರೋಧಿ ಅಲ್ಲ, ಮಾಂಸಹಾರ ಊಟದ ಪದ್ಧತಿ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನಿಮ್ಮ ಬಾಯಿ ಚಪಲಕ್ಕಾಗಿ ಮಾಡುತ್ತಿರುವ ಹಬ್ಬಗಳಿಂದ ನೀವು ಮತ್ತು ನಿಮ್ಮ ಸಮಾಜ ಎಲ್ಲಾ ದೃಷ್ಟಿಯಿಂದ ಹಿಂದುಳಿಯುತ್ತದೆ ಎಂಬ ಅರಿವು ನಿಮಗಿರಲಿ ಎಂದು ಸ್ವಾಮೀಜಿ ಹಿಂದುಳಿದ ಜನರನ್ನು ಎಚ್ಚರಿಸಿದರು.

ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಗದಗಿನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲ ಸಚಿವರಾದ ಡಾ. ಬಸವರಾಜ್ ಎಲ್. ಲಕ್ಕಣ್ಣನವರ ಮಾತನಾಡಿ, ಕುರುಬ ಸಮಾಜವು ಉನ್ನತ ಶಿಕ್ಷಣದಲ್ಲಿ ಹಿಂದೆ ಉಳಿದಿದ್ದು, ಶ್ರೀಗಳು ನಿರಂತರ ಸಂಘಟನೆಯಿಂದಾಗಿ ಸಮಾಜವು ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಮತ್ತು ಹೆಜ್ಜೆ ಇಟ್ಟಿದೆ ಎಂದರು.

ಧಾರವಾಡ ವಿ.ವಿ. ಸಹ ಪ್ರಧ್ಯಾಪಕ ಎನ್. ಹನುಮಂತ ಮಾತನಾಡಿದರು. ಹರಿಹರ ತಾಲ್ಲೂಕು ಕನಕ ನೌಕರರ ಸಂಘದ ಅಧ್ಯಕ್ಷ ಕೆ.ಲಕ್ಷ್ಮಣ ಅಧ್ಯಕ್ಷತೆ ವಹಿಸಿದ್ದರು. ಸನ್ಮಾನಿತರಾದ ಬಿಎಸ್‌ಫ್ ಕಮಾಂಡರ್ ಡಾ. ಮೈದುಲ ಮಾತನಾಡಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಹರಿಹರ ನಗರ ಸಭೆ ಅಧ್ಯಕ್ಷೆ ಶ್ರೀಮತಿ ನಿಂಬಕ್ಕ ಚಂದಾಪುರ್, ಮಾಜಿ ಅಧ್ಯಕ್ಷ ಬಿ. ರೇವಣ ಸಿದ್ದಪ್ಪ ತಾ. ಕುರುಬ ಸಂಘದ ಅಧ್ಯಕ್ಷ ಪೂಜಾರ್ ಹಾಲೇಶಪ್ಪ, ಕಾಳಿದಾಸ ವಿದ್ಯಾಸಂಸ್ಥೆ ಅಧ್ಯಕ್ಷ ಕೆ ಬಿ ರಾಜಶೇಖರ್, ತಾ ಕುರುಬ ಸಮಾಜದ ಮಾಜಿ ಅಧ್ಯಕ್ಷ ಕೆ. ಜಡಿಯಪ್ಪ, ತಾ.ಪಂ. ಮಾಜಿ ಅಧ್ಯಕ್ಷರಾದ ಎಸ್.ಜಿ. ಪರಮೇಶ್ವರಪ್ಪ, ಐರಣಿ ಅಣ್ಣಪ್ಪ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ಸಿಪಿಐಗಳಾದ ಕುಣೆ ಬೆಳಕೆರೆ ದೇವೇಂದ್ರಪ್ಪ, ಸಿದ್ಧೇಗೌಡ, ಸುರೇಶ್ ಸಗರಿ, ಪಿಎಸ್‌ಐಗಳಾದ ಭಾನುವಳ್ಳಿ ನಾಗರಾಜ್, ಎಸ್.ಆರ್. ಮಾರುತಿ, ಪ್ರವೀಣ್ ವಾಲಿಕಾರ್, ನಿವೃತ್ತ ಅಧಿಕಾರಿಗಳಾದ ಎಂ.ಬಿ. ಕರಿಯಪ್ಪ, ಭಾನುವಳ್ಳಿಯ ಜಿ. ಚಂದ್ರಪ್ಪ, ಕೊತ್ತಂಬರಿ ಸಿದ್ಧಪ್ಪ, ವೈ.ಎನ್. ರಂಗನಾಥ್, ಸುಭಾಷ್ ಚಂದ್ರ, ರಾಮಕೃಷ್ಣ ಆಸ್ಪತ್ರೆಯ ಡಾ. ಮಹೇಶ್, ಸ್ತ್ರೀ ರೋಗ ತಜ್ಞೆ ಡಾ. ಭಾರತಿ ರಂಗಸ್ವಾಮಿ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ದಂಡಿ ತಿಪ್ಪೇಸ್ವಾಮಿ, ವೈದ್ಯರಾದ ಡಾ. ಮಮತಾ, ಡಾ. ಪ್ರವೀಣ್, ಮುಖಂಡರಾದ ನಾಗೇನಹಳ್ಳಿ ಮಹಾಂತೇಶ್, ಬಿರೇಶ್, ಮಲ್ಲನಾಯ್ಕನಹಳ್ಳಿ ಅಶೋಕ್, ಕನಕ ನೌಕರರ ಸಂಘ ಗೌರವಾಧ್ಯಕ್ಷ ಪಿ.ಆರ್. ರಾಮಕೃಷ್ಣ ಪ್ರಧಾನ ಕಾರ್ಯದರ್ಶಿ ಕೆ. ಹೆಚ್. ನಿಜಲಿಂಗಪ್ಪ, ಕುಬೇಂದ್ರ ಮೆಕ್ಕಪ್ಪನವರ್, ಹೊನಕೇರಪ್ಪ ಮಂಜುನಾಥ್, ಕೊಕ್ಕನೂರು ಜಯಪ್ಪ, ಭಾನುವಳ್ಳಿಯ ಶಿವರಾಜ್, ಹೆಚ್ ಶಿವಕುಮಾರ್, ಜೆ ಆರ್ ಮಂಜುನಾಥ್, ಶರಣ್ ಕುಮಾರ್ ಹೆಗಡೆ, ಲಿಂಗರಾಜ್, ಡಿ.ಕೆ. ಕರಿಬಸಪ್ಪ, ರಾಮಪ್ಪ ಸೋಮಶೇಖರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ವೀರಶೈವ ಒಳಪಂಗಡಗಳಿಗೆ ಓಬಿಸಿ ಲಾಭಕರ

**(1ನೇ ಪುಟದಿಂದ)** ಕಣ್ಣುಗಳಿದ್ದಂತೆ. ಸಮಾಜವು ಎರಡನ್ನೂ ವಿಭಜಿಸಿ ನೋಡುವ ಪ್ರಯತ್ನ ಮಾಡಬಾರದು ಎಂದು ಹಿತ ನುಡಿದರು.

ಶಿವಭಕ್ತಿಯನ್ನು ಹೇಗೆ ಮಾಡಬೇಕೆಂಬ ಅರಿವು ಗುರುವಿನಿಂದಲೇ ಪ್ರಾಪ್ತವಾಗುವುದರಿಮದ ಗುರು ಭಕ್ತಿಯ ಮೂಲಕ ಅದನ್ನು ಪಡೆದುಕೊಳ್ಳದೇ ಗುರುವನ್ನು ಕಡೆಗಣಿಗಸಿ ಶಿವಭಕ್ತಿಯನ್ನು ಮಾಡಿದರೆ ಅದು ಸಿದ್ಧಿಯಾಗುವುದಿಲ್ಲ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮಾತನಾಡಿ, ಶ್ರೀಶೈಲ ಜಗದ್ಗುರುಗಳು ಹಿಂದಿನಿಂದಲೂ ನಮ್ಮ ಮನೆತನಕ್ಕೆ ಆಶೀರ್ವಾದ ಮಾಡಿದ್ದರಿಂದ ನಮಗೆ ಉನ್ನತ ಸ್ಥಾನಮಾನ ಸಿಗಲು ಸಾಧ್ಯವಾಗಿದೆ ಎಂದರು.

ಕೇದಾರ ಶ್ರೀಗಳು ಸಹ ನಮ್ಮ ನಿವಾಸಕ್ಕೆ ಆಗಮಿಸಿ ಸಂಗೀತಯುಕ್ತ ಇಷ್ಟಲಿಂಗ ಪೂಜೆ ಮಾಡಿ ನಮ್ಮನ್ನು ಹರಿಸಿರುವುದು ನಮಗೆ ಅತ್ಯಂತ ಹರ್ಷ ತಂದಿದೆ ಎಂದು ಹೇಳಿದರು. ಎಲ್ಲಾ ಪೂಜ್ಯರ ಆಶೀರ್ವಾದದಿಂದ ನಾಡಿನಲ್ಲಿ ಉತ್ತಮ ಮಳೆ, ಬೆಳೆಯಾಗಿ ರೈತರ ಬದುಕು ಹಸನಾಗಲಿ ಎಂದು ಆಶಿಸಿದ ಸಚಿವರು, ನಮ್ಮ ಸರ್ಕಾರ ಐದು ಗ್ಯಾರಂಟಿ ನೀಡುವ ಮೂಲಕ ಮಹಿಳೆಯರಿಗೆ ಅನೇಕ ಯೋಜನೆಗಳನ್ನು ರೂಪಿಸಿದೆ. ಇದರಿಂದ ನಾಡಿನ ಜನತೆಗೆ ಒಳಿತಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ



ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ನಾವು ಭಾರತೀಯರೆಂಬ ಸಮನ್ವಯ ಭಾವ ಎಲ್ಲರಲ್ಲಿ ಮೂಡಲಿ, ನಾಡಿನಲ್ಲಿ ಮಳೆ, ಬೆಳೆ, ವ್ಯಾಪಾರ, ವಹಿವಾಟು ಸಮೃದ್ಧಿಯಾಗಿ ಆಗಲಿ ಎಂದು ಆಶಿಸಿದರು.

ಶ್ರೀಶೈಲ ಪೀಠವನ್ನು ಅತ್ಯಂತ ಎತ್ತರಕ್ಕೆ ಏರಿಸಿದ ಕೀರ್ತಿ ಲಿಂ. ವಾಗೀಶ ಪಂಡಿತಾರಾಧ್ಯ ಶ್ರೀ ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶ್ರೀಗಳಿಗೆ ಸಲ್ಲುತ್ತದೆ. ಉಭಯ ಜಗದ್ಗುರುಗಳಲ್ಲಿನ ಕರ್ತೃ ತ್ವ ಶಕ್ತಿ ಅವರ ಸೇವೆಯ ಮೂಲಕ ಉತುಂಗಕ್ಕೆ ಕೊಂಡೊಯ್ದಿದೆ ಎಂದರು.

ಬಸವನ ಬಾಗೇವಾಡಿ ಹಿರೇಮಠದ ಶ್ರೀ ಒಡೆಯರ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಪತ್ರಕರ್ತ ಪ್ರಶಾಂತ್ ರಿಪ್ಪನಪೇಟೆ, ಜ್ಯೋತಿ ರಾಧೇಶ್ ಜಂಬಗಿ ಮಾತನಾಡಿದರು.

ಕಾಶೀ ಜಗದ್ಗುರುಗಳು ಸೇರಿದಂತೆ ಅಂಬಿಕಾನಗರದ ಶ್ರೀ ಈಶ್ವರ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ರಾಮಘಟ್ಟದ ಶ್ರೀ ರೇವಣಸಿದ್ದ ಶಿವಾಚಾರ್ಯ ಸ್ವಾಮೀಜಿ, ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮೀಜಿ, ಮಣಕೂರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಕೋಣಂದೂರು ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶ್ರೀ ಕೇದಾರ ಶಾಂತಲಿಂಗ ಸ್ವಾಮೀಜಿ, ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ತೋಗರ್ಸಿ ಶ್ರೀಗಳು ಸಮ್ಮುಖ ವಹಿಸಿದ್ದರು.

ದೂಡ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್, ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಕೆ.ಎಂ. ಪರಮೇಶ್ವರಯ್ಯ, ರಾಜಶೇಖರಯ್ಯ, ಬನ್ನಯ್ಯ ಸ್ವಾಮಿ, ರಾಜಶೇಖರ ಗುಂಡಗಟ್ಟಿ, ಎಂ.ಎನ್. ಹರೀಶ್, ಟಿ.ಎಂ. ವಿನಾಯಕ, ಕೊಟ್ರೇಶ್, ಎನ್.ಹೆಚ್.ಪಾಟೀಲ್, ಹೇಮಂತ ಆರಾಧ್ಯ, ಬೆಳ್ಳೂಡಿ ಜ್ಯೋತಿ ಪ್ರಕಾಶ್, ಆರ್.ಟಿ. ಪ್ರಶಾಂತ್, ಎಂ. ಎನ್. ಜಯಪ್ರಕಾಶ್ ಮತ್ತಿತರರಿದ್ದರು.

ಶ್ರೀಶೈಲ ಮಠದ ಗುರುಕುಲ ಸಾಧಕರಿಂದ ವೇದಘೋಷ, ಸಂಗೀತಾ ರಾಘವೇಂದ್ರ ಪ್ರಾರ್ಥಿಸಿದರು. ಮುರುಗೇಶ್ ಸ್ವಾಗತಿಸಿದರು. ಸೌಭಾಗ್ಯ ಹಿರೇಮಠ ನಿರೂಪಿಸಿದರು. ಶಿವಕುಮಾರ್ ಶೆಟ್ಟರ್ ಧ್ವಜ ವಂದನೆ ಸ್ವೀಕರಿಸಿದರು.

# ಹೊನ್ನಾಳಿ ಅರ್ಬನ್ ಕ್ರೆಡಿಟ್ ಸೊಸೈಟಿಗೆ 80 ಲಕ್ಷ ನಿವ್ವಳ ಲಾಭ

## ಸೊಸೈಟಿಯ ಅಧ್ಯಕ್ಷ ಡಾ. ರಾಜಕುಮಾರ್ ಸಂತಸ

ಹೊನ್ನಾಳಿ, ಸೆ. 26 - ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುತ್ತಾ ಬಂದಿದ್ದು, 2022-23ನೇ ಸಾಲಿಗೆ 80.02 ಲಕ್ಷ ನಿವ್ವಳ ಲಾಭಗಳಿಸಿದೆ ಎಂದು ಸೊಸೈಟಿಯ ಅಧ್ಯಕ್ಷ ಡಾ. ರಾಜಕುಮಾರ್ ಹೇಳಿದರು.

ಅವರು ಪಟ್ಟಣದ ಹಿರೇಕಲ್ಮಠದ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಸೊಸೈಟಿಯ 2022-23ನೇ ಸಾಲಿನ ವಾರ್ಷಿಕ ಮಹಾಸಭೆಗೆ ಚಾಲನೆ ನೀಡಿ ಮಾತನಾಡಿದರು.

ಪ್ರಸ್ತುತ 3745 ಸದಸ್ಯರುಗಳಿದ್ದು 3.05 ಕೋಟಿ ಷೇರು ಬಂಡವಾಳ ಹೊಂದಿದೆ. 18.76 ಕೋಟಿ ಒಟ್ಟು ಠೇವಣಿಗಳನ್ನು



ಹೊಂದಿದ್ದು, ಸಂಘವು ತನ್ನ ಮೂಲ ಬಂಡವಾಳದಲ್ಲಿಯೇ ಸಂಘದ ಸದಸ್ಯರ ಮತ್ತು ಸಹಸದಸ್ಯರ ಅನುಕೂಲಕ್ಕಾಗಿ ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವಾ ಸೌಲಭ್ಯಗಳನ್ನು ಕಲ್ಪಿಸಿದೆ. ಸಂಘದ ಸದಸ್ಯರು ಗಂಪು ವಿಮೆ ಯೋಜನೆಗೆ ಒಳಪಟ್ಟಿದ್ದರೆ ಅಂತಹ ಸದಸ್ಯರು ಯಾವುದೇ ಅಪಘಾತದಿಂದ ಮರಣ ಹೊಂದಿದರೂ ಒಂದು ಲಕ್ಷ ಅವರ ವಾಸುದಾರರಿಗೆ ಕೊಡಿಸಲಾಗು ವುದು ಹಾಗೂ ಸಂಘದಿಂದ 5 ಸಾವಿರ ನೀಡಲಾಗುವುದು ಎಂದು ವಿವರಿಸಿದರು.

ಉಪಾಧ್ಯಕ್ಷ ವಿರೇಶ್ ಸ್ವಾಗತಿಸಿದರು, ಮಾಜಿ ಉಪಾಧ್ಯಕ್ಷ ಡಾ.ರಾಜಾನಾಯ್ಕ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ದರು. ನಿರ್ದೇಶಕರುಗಳಾದ ಎನ್. ಜಯರಾವ್, ಎಚ್.ಎಂ. ಶಿವಮೂರ್ತಿ, ಎಚ್.ಬಿ. ಮೋಹನ್, ಕೆ.ಆರ್. ನಾಗ ರಾಜ್, ಸಿ.ಕೆ. ರವಿಕುಮಾರ್, ಬಿ.ಎಚ್.ಉಮೇಶ್, ಎಚ್. ಎಂ. ಅರುಣ್ ಕುಮಾರ್, ಎನ್. ಪ್ರಸಾದ್, ಎಚ್.ಕೆ. ರೂಪ, ಎನ್.ಎನ್.ನಾಗರತ್ನ, ಎನ್. ಶಾಂತಲಾ ಮುಂತಾದವರು ಇದ್ದರು.

# ಅ.1ರಂದು ಉಪ್ಪಾರ ಮಹಾಸಭಾದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಸೆ.26- ಕರ್ನಾಟಕ ರಾಜ್ಯ ಉಪ್ಪಾರ ಮಹಾಸಭಾದಿಂದ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಹಾಗೂ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮವನ್ನು ಅಕ್ಟೋಬರ್ 1ರಂದು ಹುಬ್ಬಳ್ಳಿಯ ಅಮರಗೋಳದಲ್ಲಿನ ವಿದ್ಯಾಧಿರಾಜ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಭರತ್ ಎಸ್.ಮೈಲಾರ್ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳ ಜೊತೆ ಹೆಚ್ಚು ಅಂಕ ಪಡೆದ ಪದವಿ ವಿದ್ಯಾರ್ಥಿಗಳಿಗೂ ಗೌರವಿಸಲಾಗುವುದು. ಇದೇ ವೇಳೆ ರಾಜ್ಯಮಟ್ಟದ ಮಹಿಳಾ ನೌಕರರ ಸಮಾವೇಶವನ್ನೂ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮಲ್ಲಿ ವಿವಿಧ ಮಠಾಧೀಶರು ಆಗಮಿಸಲಿದ್ದಾರೆ. ಸಚಿವರುಗಳಾದ ಮಧು ಬಂಗಾರಪ್ಪ, ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಶಿವರಾಜ ತಂಗಡಗಿ, ಸಂತೋಷ್ ಲಾಡ್ ಸೇರಿದಂತೆ ಸ್ಥಳೀಯ ಶಾಸಕರುಗಳು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ವಿಷ್ಣು ರಾ ಲಾತೂರ್, ರಾಜ್ಯ ಉಪಾಧ್ಯಕ್ಷ ಈಶ್ವರಪ್ಪ ಶಿರಕೋಳ, ಗೌರವ ಸಲಹೆಗಾರ ರಾಮಕೃಷ್ಣ ಬಬಲಿ, ಮಂಜುನಾಥ್ ಇತರರು ಇದ್ದರು.

# ಪ್ರತಿಯೊಬ್ಬರಲ್ಲಿನ ಕೌಶಲ್ಯ ಹೊರತೆಗೆಯುವುದೇ ರಾ.ಸೇ.ಯೋಜನೆಯ ಉದ್ದೇಶ : ಪ್ರೊ. ಅಣ್ಣಯ್ಯ



ದಾವಣಗೆರೆ, ಸೆ. 26- ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ, ರಾಷ್ಟ್ರ ಪ್ರೇಮ, ಸೇವಾ ಮನೋಭಾವನೆಯನ್ನು ಬೆಳೆಸುವ ಒಂದು ದೊಡ್ಡ ಸಂಘಟನೆಯ ರಾಷ್ಟ್ರೀಯ ಸೇವಾ ಯೋಜನೆ ಪ್ರತಿಯೊಬ್ಬರಲ್ಲೂ ಕೌಶಲ್ಯವನ್ನು ಹೊರತೆಗೆಯುವುದೇ ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶ ಎಂದು ಎ.ಆರ್.ಎಂ. ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಡಿ. ಅಣ್ಣಯ್ಯ ತಿಳಿಸಿದರು.

ಅವರು ನಗರದ ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನಾ ಸಂಸ್ಥಾಪನಾ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಗಾಂಧೀಜಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ 1969 ಸೆಪ್ಟೆಂಬರ್ 24ರಂದು ರಾಷ್ಟ್ರೀಯ ಸೇವಾ ಯೋಜನೆಗೆ ಚಾಲನೆ ನೀಡಲಾಯಿತು ಎಂದು ಅಣ್ಣಯ್ಯ ತಿಳಿಸಿದರು.

ಮತ್ತೋರ್ವ ಅತಿಥಿಗಳಾದ ಎಸ್. ಪರಮೇಶಿ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯ ಮೂಲ ಪೂರ್ವಜ ಅಥವಾ ಮೊದಲ ರಾಷ್ಟ್ರ ಸೇವಾಧಿಕಾರಿ ಎಂದರೆ ಸಾಮ್ರಾಟ್ ಅಶೋಕ. ಏಕೆಂದರೆ ಆಗಿನ ಕಾಲದಲ್ಲಿ ಸಾಲು ಸಾಲು ಮರಗಳನ್ನು ನೆಡುವುದು, ಕೆರೆ-ಕಟ್ಟೆಗಳ ನಿರ್ಮಾಣ ಮೊದಲಾದ ಕೆಲಸಗಳನ್ನು ಮಾಡಿದ್ದರು ಎಂದು ತಿಳಿಸಿದರು.

ಪ್ರಾಂಶುಪಾಲರಾದ ಜಿ.ಸಿ. ನೀಲಾಂಬಿಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಡಾ. ವಿಜಯ್ ಕುಮಾರ, ಡಾ. ಎಂ. ಮಂಜಪ್ಪ, ಪ್ರೊ. ಟಿ.ಆರ್. ರಂಗಸ್ವಾಮಿ, ಪ್ರೊ. ಜೆ. ತಾರಾ ರಾಣಿ, ಡಾ. ಕಾವ್ಯ, ಸುರೇಖಾ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರಾಷ್ಟ್ರೀಯ ಸೇವಾ ಸಂಯೋಜನಾಧಿಕಾರಿ ಡಾ. ಆರ್. ರಾಘವೇಂದ್ರ ಪ್ರಾಸ್ತಾವಿಕ ಮಾತನಾಡಿ ಮತ್ತು ಸ್ವಾಗತಿಸಿದರು. ಆಶಾ ನಿರೂಪಿಸಿದರು. ಡಾ. ಓ. ಪ್ರವೀಣ್ ವಂದಿಸಿದರು.



# ದಸರಾ ಕ್ರೀಡಾಕೂಟ ಯೋಗ ಸ್ಪರ್ಧೆಯಲ್ಲಿ ಕೆ.ವೈ.ಸೃಷ್ಟಿಗೆ ಪ್ರಥಮ ಸ್ಥಾನ

ದಾವಣಗೆರೆ, ಸೆ. 24 - ಅಂತರರಾಷ್ಟ್ರೀಯ ಮಟ್ಟದ ಬಾಲ ಯೋಗ ಪ್ರತಿಭೆ ಹರಿಹರದ ಸೃಷ್ಟಿ ಕೆ.ವೈ. ದಸರಾ ಕ್ರೀಡಾಕೂಟದಲ್ಲಿ ಯೋಗ ವಿಭಾಗ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ದಾವಣಗೆರೆ - ಹರಿಹರ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಡೆದ ದಸರಾ ಕ್ರೀಡಾಕೂಟ ಆಯೋಜಿಸಲಾಗಿತ್ತು. ಸೃಷ್ಟಿ, ಇಪ್ಟಾ ಕಲಾ ತಂಡದ ಉಪಾಧ್ಯಕ್ಷೆ ಶ್ರೀಮತಿ ಶಾಂಭವಿ ಯೋಗೇಶ್ ಪುತ್ರಿ.

# ಜನತಾ ದರ್ಶನ ಎಷ್ಟು ಮುಖ್ಯವೋ ಭದ್ರಾ ನೀರಿನ ರೈತರ ಹೋರಾಟವೂ ಅಷ್ಟೇ ಮುಖ್ಯ



## ಹನಗವಾಡಿಯಲ್ಲಿನ ಜನತಾ ದರ್ಶನ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್

ಹರಿಹರ, ಸೆ. 26 - ತಾಲ್ಲೂಕಿನ ಹನಗವಾಡಿ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಸೋಮವಾರ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹದಿನೈದು ಅರ್ಜಿಗಳನ್ನು ಸಲ್ಲಿಸಿದರು. ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಜನರ ಮನೆ ಬಾಗಿಲಿಗೆ ಅಧಿಕಾರಿಗಳು ಎಂಬಂತೆ ಜನರ ಸಮಸ್ಯೆಗಳನ್ನು ಆಲಿಸಲು ನಾವು ಮುಂದಾಗಿದ್ದೇವೆ. ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಈ ಸಭೆಯ ಗಮನಕ್ಕೆ ತಂದರೆ ಕೂಡಲೇ ಸಂಬಂಧಪಟ್ಟ ಇಲಾಖೆಯಿಂದ ಪರಿಹಾರ ಕೊಡಿಸುತ್ತೇವೆ ಎಂದು ತಹಶೀಲ್ದಾರ್ ಪೃಥ್ವಿ ಸಾನಿಕಂ ತಿಳಿಸಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸರ್ಕಾರದ ತಪ್ಪು ನಿರ್ಧಾರಗಳಿಂದ ಭದ್ರಾ ಅಚ್ಚುಕಟ್ಟು ಪ್ರದೇಶದ ದಾವಣಗೆರೆ ಜಿಲ್ಲೆಯ ರೈತರು ನೀರಿಗಾಗಿ ಬೀದಿಗಿಳಿದು ಹೋರಾಟ ಮಾಡುವ ಅನಿವಾರ್ಯತೆ ಒದಗಿಬಂದಿದೆ. ನನಗೆ ಜನತಾ ದರ್ಶನ ಎಷ್ಟು ಮುಖ್ಯವೋ ಭದ್ರಾ ನೀರಿನ ರೈತರ ಹೋರಾಟವೂ ಅಷ್ಟೇ ಮುಖ್ಯ ಎಂದರು.

ತಾ.ಪಂ ಕಾರ್ಯನಿರ್ವಹಣಾಧಿಕಾರಿ ಎನ್.ರವಿ ಮಾತನಾಡಿ, ಜನರ ಸಮಸ್ಯೆಗಳಿಗೆ ಸಾಧ್ಯವಾದರೆ ಇಂದೇ ಪರಿಹಾರ ನೀಡುತ್ತೇವೆ, ಇಲ್ಲವಾದಲ್ಲಿ ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತಂದು ಬಗೆಹರಿಸುವ ಪ್ರಯತ್ನ ಮಾಡುತ್ತೇವೆ ಎಂದರು.

ಹನಗವಾಡಿ ಗ್ರಾಮ ಪಂಚಾಯಿತಿ ಸದಸ್ಯರಾದ ಪ್ರವೀಣ್ ಮಾತನಾಡಿ, ಹಲಸಬಾಳು, ಹರಗನಹಳ್ಳಿ, ಹನಗವಾಡಿ, ಬೆಳ್ಳೂಡಿ ಗ್ರಾಮದ ಶಾಲಾ ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಸಿಟಿ ಬಸ್ ಸೌಲಭ್ಯ, ಗ್ರಾಮದ ಪಶು ಆಸ್ಪತ್ರೆಗೆ ಖಾಯಂ ವೈದ್ಯರು, ಕೈಗಾರಿಕೆ ಅಭಿವೃದ್ಧಿ ಪ್ರದೇಶವನ್ನು ಗ್ರಾ.ಪಂ.ಗೆ ಹಸ್ತಾಂತರಿಸುವುದು, ಗ್ರಾಮ ಠಾಣೆ ವಿಸ್ತರಣೆ ಸೇರಿದಂತೆ ವಿವಿಧ ಸೌಲಭ್ಯಗಳ ಬಗ್ಗೆ ಗಮನ ಸೆಳೆದರು.

ಹನಗವಾಡಿ ಗ್ರಾ.ಪಂ ಅಧ್ಯಕ್ಷ ಬಿ.ಎನ್. ತಿಪ್ಪೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ದ್ರಾಕ್ಷಾಯಣಮ್ಮ, ಸದಸ್ಯರಾದ ಎಸ್.ಹೆಚ್. ಸವಿತಾ, ಲಕ್ಷ್ಮವ್ವ, ಪುಷ್ಪಾ, ಹನುಮಂತಪ್ಪ, ಶಾರದಮ್ಮ, ಸುಜಾತ, ಪಿಡಿಓ ರೇಣುಕಾ ಬಾಯಿ ಮತ್ತಿತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಮಾನವೀಯ ಮೌಲ್ಯ ಬೆಳೆಸಿಕೊಳ್ಳಿ

## ಹಳೇ ಕುಂದುವಾಡದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಬಸವಂತಪ್ಪ ಕರೆ

ದಾವಣಗೆರೆ, ಸೆ. 26 - ನಗರದ ಹಳೇ ಕುಂದುವಾಡದಲ್ಲಿ ಮನಾ ಯುವ ಬ್ರಿಗೇಡ್, ಜನತಾ ರಕ್ಷಣಾ ವೇದಿಕೆಯ ಆರನೇ ವಾರ್ಷಿಕೋತ್ಸವ ಬೆಳ್ಳಿ ಕಪ್ ಪ್ರಶಸ್ತಿ ಪ್ರದಾನ ಸಮಾರಂಭ, ಸರ್ಕಾರಿ ಶಾಲೆ, ಕಾಲೇಜಿನ ಎಸ್ ಎಸ್ ಎಲ್ ಸಿ ಹಾಗೂ ದ್ವಿತೀಯ ಪಿಯುಸಿ ಟಾಪರ್ ಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿತ್ತು..

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡುವುದು ಮಹತ್ವದ ಕೆಲಸವಾಗಿದೆ, ವಿದ್ಯಾರ್ಥಿಗಳಿಗೆ ಪ್ರೇರಣೆ ತುಂಬುವುದು ಅವಶ್ಯಕವಾಗಿದೆ.

ವಿದ್ಯಾಭ್ಯಾಸಕ್ಕೆ ಹೆಚ್ಚು ಮಹತ್ವ ಕೊಡಬೇಕಿದೆ, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಮಾನವೀಯ ಮೌಲ್ಯ ಬೆಳೆಸಿಕೊಳ್ಳಬೇಕು, ಎಷ್ಟೇ ಡಿಗ್ರಿಗಳನ್ನು ಓದಿದವರು, ಮಾನವೀಯತೆ ಸಹಾಯ ಗುಣ ಇಲ್ಲ ಎಂದರೆ ಉಪಯೋಗವಿಲ್ಲ ಎಂದು ಕಿವಿ ಮಾತು ಹೇಳಿದರು.

**ನಾನು ಕುಂದುವಾಡ ಮಣ್ಣಿನ ಮಗ :** ನಾನು ಹಳೇ ಕುಂದುವಾಡದ ಮಣ್ಣಿನ ಮಗ, ನನ್ನದು ಮೂಲತಃ ಇದೇ ಊರು, ನಾವು ಹುಟ್ಟಿ ಬೆಳೆದಿದ್ದು ಇದೇ ಊರಿನಲ್ಲಿ, ಬಳಿಕ ಗಾಂಧಿ ನಗರಕ್ಕೆ ಹೋದೆವು, ನನ್ನ ಹೆಸರು ಕೆ.ಎಸ್. ಬಸವಂತಪ್ಪ, ಕೆ. ಎಂದರೆ ಕುಂದುವಾಡ, ಎಸ್.ಎಂದರೆ ನಮ್ಮ



ತಂದೆಯ ಹೆಸರು ಸಂಗಪ್ಪ, ಮಾಜಿ ಸಚಿವ ಹೆಚ್. ಆಂಜನೇಯ ನನ್ನ ಮಾವ, ಹೆಚ್ ಆಂಜನೇಯ ಅವರು ಹಳೇ ಕುಂದುವಾಡದಲ್ಲಿ ಶಾಲೆ ಆರಂಭಿಸಿದ್ದರು, ಸೈಕಲ್‌ನಲ್ಲಿ ಬಂದು ಶಾಲೆ ನಡೆಸುತ್ತಿದ್ದರು, ಇನ್ನೂ ನನ್ನ ಹುಟ್ಟೂರು ಕುಂದುವಾಡಕ್ಕೆ ಬರಬೇಕು ಅಂದುಕೊಂಡಿದ್ದೆ, ಮನಾ ಯುವ ಬ್ರಿಗೇಡ್ ವೇದಿಕೆಯವರು ನನ್ನನ್ನೂ ಕರೆಯಿಸಿ ಗೌರವಿಸಿದ್ದು ಮರೆಯಲಾಗದ ಕ್ಷಣ ಎಂದು ಹಳೇ ನೆನಪು ಮೆಲುಕು ಹಾಕಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸ ಕರಿಯಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಸರ್ಕಾರಿ ಶಾಲೆ, ಕಾಲೇಜಿನ ಎಸ್ ಎಸ್ ಎಲ್ ಸಿ, ಪಿಯುಸಿ 36 ಟಾಪರ್‌ಗಳಿಗೆ ಸನ್ಮಾನಿಸಿ ಗೌರವಿಸಲಾಯಿತು, ಬೆಳ್ಳಿ ಕಪ್ ವಿತರಣೆ ಸಮಾರಂಭ ನಡೆಯಿತು, ಪವರ್ ಫೈಟರ್ಸ್ ಪ್ರಥಮ, ಕುಂದುವಾಡ ಯೋದಾಸ್ ತಂಡ ದ್ವಿತೀಯ, ಆರ್ ಎಕ್ಸ್ ಟಗರು ತಂಡ ತೃತೀಯ ಬಹುಮಾನ ಸ್ವೀಕಾರ ಮಾಡಿತು.

ವೇದಿಕೆ ಅಧ್ಯಕ್ಷ ಮಧುನಾಗರಾಜ್ ಕುಂದುವಾಡ ಅಧ್ಯಕ್ಷತೆ ವಹಿಸಿದ್ದರು, ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಪ್ರಸನ್ನ ಕುಮಾರ್, ಮಾಜಿ ಕಾರ್ಪೊರೇಟರ್, ಹೆಚ್. ತಿಪ್ಪಣ್ಣ, ಮಾಜಿ ಮೇಯರ್ ಹೆಚ್. ಎನ್. ಗುರುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಜಿ. ಗಣೇಶಪ್ಪ, ಮುಖಂಡರಾದ ಲೋಕಿಕೆರೆ ಮಂಜುನಾಥ್, ಸಣ್ಣಿಂಗಪ್ಪ, ಮಲ್ಲಿಕಾರ್ಜುನ್, ಕೆಂಪು ನಿಂಗಪ್ಪರ ಮಂಜಪ್ಪ, ಬೆಳ್ಳೂಡಿ ಮಂಜಪ್ಪ, ಬಾರಿಕರ ಚಂದ್ರಪ್ಪ, ನರಸಪ್ಪರ ಶಿವಪ್ಪ, ನರಸಪ್ಪರ ಲಿಂಗರಾಜ್, ಸಂಪತ್ ಕುಮಾರ್, ಪ್ರಭು, ಬೆಳ್ಳೂಡಿ ಕುಮಾರ್, ಡಿಜಿ ಪ್ರಕಾಶ್, ರಾಜು ಕರೂರು, ನಾಗರಾಜ್ ಎಸ್ ಬಿ, ಸಿದ್ದಲಿಂಗಪ್ಪ, ಹನುಮಂತಪ್ಪ, ಅಂಗಡಿ ಸಂಗಪ್ಪ, ಅಣ್ಣಪ್ಪ, ಕರಿಬಸವರಾಜ್ ಸೇರಿದಂತೆ ಮತ್ತಿತರರಿದ್ದರು.

# ನಗರದಲ್ಲಿ ಇಂದು ಅಧಿವಕ್ತ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ

ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತದ ಜಿಲ್ಲಾ ಘಟಕದಿಂದ ಅಧಿವಕ್ತ ಪರಿಷತ್ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಕಾನೂನು ಕಾರ್ಯಾಗಾರವನ್ನು ಇಂದು ಸಂಜೆ 4.30ಕ್ಕೆ ನಗರದ ರೋಟರಿ ಬಾಲಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಧಿವಕ್ತಾ ಪರಿಷತ್ ಜಿಲ್ಲಾಧ್ಯಕ್ಷರೂ ಆಗಿರುವ ಹಿರಿಯ ವಕೀಲ ಎಲ್. ದಯಾನಂದ್ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮದಲ್ಲಿ ಭೂ ಮಾಪನ ಇಲಾಖೆ ನಿವೃತ್ತ ಪರಿವೀಕ್ಷಕ ಡಾ. ಎಸ್. ರಂಗನಾಥ್ ಅವರು ಭೂ ಮಾಪನಾ ಮತ್ತು ಭೂ ದಾಖಲೆಗಳ ಕುರಿತು ಉಪನ್ಯಾಸ ನೀಡುವರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ, ಹಿರಿಯ ವಕೀಲರಾದ ಶ್ರೀಮತಿ ಜಿ.ಇ. ವನಜಾಕ್ಷಿ, ವಕೀಲ ಎಂ.ಎಸ್. ಮನೋಜ್ ಕುಮಾರ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ಅಧಿವಕ್ತಾ ಪರಿಷತ್ತಿನ ಹಿರಿಯ ವಕೀಲರುಗಳನ್ನು ಸನ್ಮಾನಿಸಲಾಗುತ್ತದೆ ಎಂದು ಜಿಲ್ಲಾ ಅಧಿವಕ್ತ ಪರಿತ್ ಕಾರ್ಯದರ್ಶಿ ವಿ. ವಸಂತ ಕುಮಾರ್ ತಿಳಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಬೆಂಗಳೂರು ಬಂದ್ ಯಶಸ್ವಿ

## ಸ್ವಯಂ ಪ್ರೇರಿತವಾಗಿ ಬಂದ್‌ಗೆ ಬೆಂಬಲ ನೀಡಿದ ಜನತೆ

ಬೆಂಗಳೂರು, ಸೆ. 26 - ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ರೈತರ ಮತ್ತು ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ರಾಜಧಾನಿ ಬಂದ್ ಯಶಸ್ವಿಯಾಗಿದೆ.

ಸಂಘಟನೆಗಳ ಕರೆಗೆ ಬಿಜೆಪಿ ಮತ್ತು ಜೆಡಿಎಸ್ ಬೆಂಬಲ ನೀಡಿದ್ದವು. ಆದರೆ, ರಾಜ್ಯ ಸರ್ಕಾರವು ಇದನ್ನು ವಿರೋಧಿಸಿ ಕಡು ಎಚ್ಚರಿಕೆ ನೀಡಿದ್ದರೂ ಅದನ್ನು ಲೆಕ್ಕಿಸದೇ ವಿವಿಧ ಧರ್ಮ ಮತ್ತು ಭಾಷಿಕರು ಸ್ವಯಂ ಪ್ರೇರಿತರಾಗಿ ಬಂದ್‌ಗೆ ಬೆಂಬಲಿಸಿ ಕರ್ನಾಟಕದ ಪರ ನಿಂತರು.

ಬಂದ್ ಯಶಸ್ವಿಯಾಗುವುದನ್ನು ತಡೆಯಲು ರಾಜ್ಯ ಸರ್ಕಾರ ಬೆಂಗಳೂರು ನಗರದಲ್ಲಿ 144ರಡಿ ನಿಷೇಧಾಜ್ಞೆ ಜಾರಿಗೊಳಿಸಿ, ಬಂದ್ ಬೆಂಬಲಿಸಿ ಪ್ರತಿಭಟನೆ ಹಾಗೂ ರ‍್ಯಾಲಿ ಮಾಡಿದರೆ ಅಂತ ಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿತ್ತು. ಬಂದ್ ವಿಫಲಗೊಳಿಸಲು ನಗರ ಮತ್ತು ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಮತ್ತು ಮೆಟ್ರೋ ರೈಲುಗಳು ಎಂದಿನಂತೆ ಸಂಚರಿಸಲು ಅವಕಾಶ ಮಾಡಿಕೊಟ್ಟಿದ್ದರೂ ಪ್ರಯಾಣಿಕರ ಸಂಖ್ಯೆಯೇ ವಿರಳವಾಗಿತ್ತು.

ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ-ಕಾಲೇಜುಗಳಿಗೆ ರಜೆ ನೀಡಿದ್ದ ಸರ್ಕಾರ, ಉಳಿದಂತೆ ಸರ್ಕಾರಿ ಸೇವೆಯು ಎಂದಿನಂತೆ ನಡೆಯುವಂತೆ ನೋಡಿಕೊಳ್ಳಲು ಯಶಸ್ವಿಯಾಯಿತು.

ಆದರೆ, ಕಚೇರಿಗಳಲ್ಲಿ ನೌಕರರ ಹಾಜರಾತಿ ಕಡಿಮೆ ಇತ್ತು. ಸಂಘಟನೆಗಳು ನೀಡಿದ್ದ ಬಂದ್ ಕರೆಗೆ ಸಿನಿಮಾ, ಮಾಲ್ ಸೇರಿದಂತೆ ವಾಣಿಜ್ಯ ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು.

ಆಟೋ ಮತ್ತು ಕ್ಯಾಬ್‌ಗಳು ವಿರಳವಾಗಿದ್ದವು. ಸದಾ ವಾಹನ ದಟ್ಟಣೆ ಎದುರಿಸುತ್ತಿದ್ದ ಪ್ರಮುಖ ರಸ್ತೆಗಳಲ್ಲಿ ಸಂಚಾರ ವಿರಳವಾಗಿ ಬಿಕೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು. ವಿಧಾನಸೌಧದ ಸರಹದ್ದಿನಲ್ಲಿ ಕನ್ನಡಪರ ಹಾಗೂ ರೈತ ಮುಖಂಡರು ಮತ್ತು ವಿವಿಧೆಡೆ ಸಂಘಟನೆಗಳು ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿ ತಕ್ಷಣವೇ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸುವಂತೆ ಆಗ್ರಹಿಸಿದವು.

ವಿಧಾನಸೌಧ ಮತ್ತು ರಾಜಭವನ ಮುತ್ತಿಗೆ ಹಾಕಲು ಯತ್ನಿಸಿದ ಚಳವಳಿಗಾರರನ್ನು ಮಧ್ಯೆಯೇ ತಡೆದ ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು. ರೈತ ಸಂಘಟನೆ ಮತ್ತಿತರೆ ಕನ್ನಡಪರ ಸಂಘಟನೆಗಳು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಸರ್ಕಾರದ ಪರವಾಗಿ ತೆರಳಿದ ಸಚಿವ ರಾಮಲಿಂಗಾರೆಡ್ಡಿ ಅವರು ಮನವಿ ಪಡೆದು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ಪ್ರತಿಭಟನಾ ನಿರತ ರಾಜಕೀಯ ಪಕ್ಷಗಳ ಕೆಲವು ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

# ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ತೀವ್ರವಾದಿಗಳಿಗೆ ರಕ್ಷಣೆ

## ಖಲಿಸ್ತಾನಿಗಳ ಹಿಂಸಾಚಾರ, ಮಾದಕ ಕಳ್ಳಸಾಗಣೆ ಬಗ್ಗೆ ಕೆನಡಾ ಮೌನ

ನವದೆಹಲಿ, ಸೆ. 26 – ಕೆನಡಾದಲ್ಲಿ ಖಲಿಸ್ತಾನ ಪರ ಶಕ್ತಿಗಳು ಕಳೆದ 50 ವರ್ಷಗಳಿಂದ ಮುಕ್ತವಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ರಾಜಕೀಯ ಪ್ರತಿಪಾದನೆಯ ಹೆಸರಿನಲ್ಲಿ ರಕ್ಷಣೆ ನೀಡಲಾಗುತ್ತಿದೆ. ಈ ತೀವ್ರವಾದಿಗಳು ನಡೆಸುತ್ತಿರುವ ಹಿಂಸಾಚಾರ ಹಾಗೂ ಮಾದಕ ಕಳ್ಳಸಾಗಣೆ ಬಗ್ಗೆ ಕೆನಡಾ ಮೌನವಾಗಿದೆ ಎಂದು ಮೂಲಗಳು ತಿಳಿಸಿವೆ.

1985ರಲ್ಲಿ ಏರ್ ಇಂಡಿಯಾದ ಕನಿಷ್ಕ ವಿಮಾನವನ್ನು ಖಲಿಸ್ತಾನಿಗಳು ಸ್ಫೋಟಿಸಿದ್ದರು. ಅಮೆರಿಕದ ಮೇಲೆ ನಡೆದ 9/11ರ ಉಗ್ರವಾದಿ ದಾಳಿಗೆ ಮೊದಲು, ಇದು ವಿಶ್ವದ ಅತಿ ದೊಡ್ಡ ಉಗ್ರವಾದಿ ದಾಳಿಗಳಲ್ಲಿ ಒಂದಾಗಿತ್ತು.

ಆದರೆ, ಕೆನಡಾದ ಸಂಸ್ಥೆಗಳು ಈ ಕೃತ್ಯ ಎಸಗಿದವರ ಬಗ್ಗೆ ಉಡಾಫೆಯ ಧೋರಣೆ ತೋರಿದವು. ಪ್ರಮುಖ ಆರೋಪಿ ತಲ್ವಿಂದರ್ ಸಿಂಗ್ ಪರ್ಮಾರ್ ಹಾಗೂ ಆತನ ಖಲಿಸ್ತಾನಿ ಬೆಂಬಲಿಗರು ಈ ಪ್ರಕರಣದಿಂದ ಮುಕ್ತವಾಗಿ ಹೊರ ಬಂದರು ಎಂದು ಮೂಲಗಳು ತಿಳಿಸಿವೆ.

ವಿಪರ್ಯಾಸ ಎಂದರೆ ಪರ್ಮಾರ್‌ನನ್ನು ಈಗ ಕೆನಡಾದ ಖಲಿಸ್ತಾನಿ ಪರ ಶಕ್ತಿಗಳು ಧೀರನೆಂದು ಬಿಂಬಿಸುತ್ತಿವೆ. ನಿಷೇಧಿತ ಸಿಖ್ಸ್ ಫಾರ್ ಜಸ್ಟೀಸ್ ಸಂಘಟನೆ ಆತನ ಹೆಸರಿನ ಸುತ್ತ ಮುತ್ತಲೇ ಪ್ರಚಾರ ನಡೆಸುತ್ತಿದೆ. ಕಳೆದ ಹಲವಾರು ವರ್ಷಗಳಲ್ಲಿ ಖಲಿಸ್ತಾನಿ ತೀವ್ರವಾದಿಗಳು ಮತ್ತಷ್ಟು ದಿಟ್ಟವಾಗಿದ್ದಾರೆ. ಕೆನಡಾದ ನೆರವಿನಿಂದ ನಿರ್ಬಂಧವಿಲ್ಲದೇ ಕೆಲಸ ಮಾಡುತ್ತಿದ್ದಾರೆ.

ಪಾಕಿಸ್ತಾನದಲ್ಲಿ ಕಳೆದ ದಶಕದಲ್ಲಿ ನಡೆದ ಉಗ್ರವಾದಿ ಕೃತ್ಯಗಳಲ್ಲಿ ಕೆನಡಾದ ಖಲಿಸ್ತಾನಿಗಳ ಪಾಲು ಅರ್ಧಕ್ಕೂ ಹೆಚ್ಚಾಗಿದೆ ಎಂದೂ ಮೂಲಗಳು ಹೇಳಿವೆ. 2016ರ ನಂತರ ಪಂಜಾಬ್‌ನಲ್ಲಿ ಸಿಖ್ಖರು, ಹಿಂದೂಗಳು ಹಾಗೂ ಕ್ರಿಶ್ಚಿಯನ್ನರನ್ನು ಗುರಿಯಾಗಿಟ್ಟುಕೊಂಡು ನಡೆಸಲಾದ ಹಲವಾರು ಹತ್ಯೆಗಳಲ್ಲಿ ಖಲಿಸ್ತಾನಿ ಪ್ರತ್ಯೇಕತಾವಾದಿ ಹರ್‌ದೀಪ್ ಸಿಂಗ್ ನಿಜ್ಜರ್ ಪಾತ್ರವಿದೆ. ಆತನ ಹತ್ಯೆ ಭಾರತ ಹಾಗೂ ಕೆಡನಾದ ನಡುವೆ ಬಿಕ್ಕಟ್ಟಿಗೆ ಕಾರಣವಾಗಿದೆ.

ನಿಜ್ಜರ್ ಹಾಗೂ ಆತನ ಸಹಚರರ ಕೃತ್ಯಗಳ ಬಗ್ಗೆ ಕೆನಡಾದ ಸಂಸ್ಥೆಗಳು ಎಂದೂ ಸಮರ್ಪಕ ತನಿಖೆ ನಡೆಸಿಲ್ಲ. ಪಂಜಾಬ್‌ನಲ್ಲಿ ಹತ್ಯೆ ನಡೆಸಿದವರನ್ನು ರಾಜಕೀಯ ಕಾರ್ಯಕರ್ತರು ಎಂದು ಕೆನಡಾ ಗುರುತಿಸುತ್ತಿದೆ.

ಕೆನಡಾ ಹಾಗೂ ಉತ್ತರ ಅಮೆರಿಕ ಮೂಲದ ಭೂಗತರಿಂದ ಪಂಜಾಬ್ ಈಗ ಪೀಡನೆಗೆ ಒಳಗಾಗಿದೆ. ಪಾಕಿಸ್ತಾನದ ಮೂಲಕ ಇವರು ಮಾದಕ ಕಳ್ಳಸಾಗಣೆ ಮಾಡುತ್ತಿದ್ದಾರೆ. ಈ ಹಣವನ್ನು ಕೆನಡಾದ ಖಲಿಸ್ತಾನಿ ತೀವ್ರವಾದಿಗಳಿಗೆ ರವಾನಿಸಲಾಗುತ್ತಿದೆ.

ಕೆನಡಾದಲ್ಲಿ ಹಲವಾರು ಖಲಿಸ್ತಾನಿ ಸಂಘಟನೆಯವರು ಮಾದಕ ವ್ಯಾಪಾರದಲ್ಲಿ ತೊಡಗಿದ್ದಾರೆ. ಪಂಜಾಬ್ ಮೂಲದ ಈ ತಂಡಗಳ ನಡುವೆ ಘರ್ಷಣೆ ನಡೆಯುವುದು ಕೆನಡಾದಲ್ಲಿ ಈಗ ಸಾಮಾನ್ಯವಾಗಿದೆ. ಭಾರತ ಪರ ಇರುವ ಸಿಖ್ ನಾಯಕ ರಿಪುದಮನ್ ಸಿಂಗ್ ಮಲಿಕ್ ಅವರನ್ನು 2022ರಲ್ಲಿ ಕೆನಡಾದಲ್ಲಿ ಹತ್ಯೆ ಮಾಡಲಾಗಿತ್ತು. ಈ ಹತ್ಯೆಯ ಹಿಂದೆ ನಿಜ್ಜರ್ ಪಾತ್ರ ಇದೆ ಎಂದು ಹೇಳಲಾಗಿತ್ತು.

ಆದರೆ, ಈ ಪ್ರಕರಣದ ಹಿಂದಿರುವವರನ್ನು ಪತ್ತೆ ಮಾಡಲು ಕೆನಡಾದ ಸಂಸ್ಥೆಗಳು ಯಾವುದೇ ಆತುರ ತೋರಲಿಲ್ಲ. ನಿಜವಾದ ಸಂಚುಕೋರರನ್ನು ಬಯಲಿಗೆ ಎಳೆಯಲಿಲ್ಲ. ಭಾರತದ ಮೂಲದವರಲ್ಲದ ಇಬ್ಬರು ಸ್ಥಳೀಯ ಅಪರಾಧಿಗಳ ವಿರುದ್ಧ ಆರೋಪ ಪಟ್ಟಿ ದಾಖಲಿಸಿದ್ದು ಬಿಟ್ಟರೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

ಖಲಿಸ್ತಾನಿಗಳ ಪರ ಮೃದು ಧೋರಣೆ ತಳೆದಿರುವ ಕಾರಣದಿಂದಾಗಿ ಕೆನಡಾದ ಹಲವಾರು ದೊಡ್ಡ ಗುರುದ್ವಾರಗಳಿಂದ ಭಾರತದ ಪರ ಇರುವ ಸಿಖ್ಖರನ್ನು ಹೊರ ಹಾಕಲಾಗಿದೆ. ಖಲಿಸ್ತಾನಿ ಪರ ಶಕ್ತಿಗಳು ಇವರ ವಿರುದ್ಧ ಹಣ ಹಾಗೂ ತೋಳ್ಬಲ ಪ್ರಯೋಗಿಸುತ್ತಿವೆ. ಕೆನಡಾದಲ್ಲಿರುವ ಹಿಂದೂಗಳ ವಿರುದ್ಧ ಬಹಿರಂಗ ಬೆದರಿಕೆ ಹಾಕಲಾಗುತ್ತಿದೆ ಹಾಗೂ ದೇವಾಲಯಗಳನ್ನು ವಿರೂಪಗೊಳಿಸಲಾಗುತ್ತಿದೆ.

ಇತ್ತೀಚೆಗೆ ಖಲಿಸ್ತಾನಿಗಳು ಭಾರತದ ರಾಯಭಾರಿ ಕಚೇರಿ ಹಾಗೂ ರಾಯಭಾರಿಗಳಿಗೆ ದೈಹಿಕ ಬೆದರಿಕೆ ಹಾಕಿದ್ದರು. ಇದು ವಿಯನ್ನಾ ಒಡಂಬಡಿಕೆಯನ್ನು ಕೆನಡಾ ಪಾಲಿಸುತ್ತಿರುವ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಮಾನವ ಹಕ್ಕುಗಳ ವಿಷಯದಲ್ಲಿ ಕೆನಡಾ ತಾರತಮ್ಯ ಮಾಡುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪಂಜಾಬ್ ಕುರಿತ ಸಣ್ಣ ವಿಷಯಗಳ ಬಗ್ಗೆಯೂ ಕೆನಡಾ ದೊಡ್ಡ ದನಿಯಲ್ಲಿ ಮಾತನಾಡುತ್ತಿದೆ. ಆದರೆ, ಖಲಿಸ್ತಾನಿ ಪರ ಇರುವವರ ಹಿಂಸಾಚಾರ, ಬೆದರಿಕೆ, ಮಾದಕ ಕಳ್ಳಸಾಗಣೆ ಹಾಗೂ ಹಣ ವಸೂಲಿ ಬಗ್ಗೆ ಮೌನವಾಗಿದೆ. ಇದು ಕೆನಡಾ ಹಾಗೂ ಭಾರತ ಎರಡರ ಮೇಲೂ ಪ್ರಭಾವ ಬೀರುತ್ತಿದೆ.

# ಕಾವೇರಿ ವಿಷಯದಲ್ಲಿ ಮತ್ತೊಂದು ಹಿನ್ನಡೆ



ಬೆಂಗಳೂರು, ಸೆ.26 - ಪೆಟ್ಟಿನ ಮೇಲೆ ಪೆಟ್ಟು ತಿನ್ನುತ್ತಿರುವ ಕರ್ನಾಟಕಕ್ಕೆ ಈಗ ಮತ್ತೆ ದೊಡ್ಡ ಹಿನ್ನಡೆ ಆಗಿದೆ. ಹಿನ್ನಡೆ ಎನ್ನುವುದು ನಿರಂತರ ವಾಗಿದ್ದು, ಕಾವೇರಿ ಜಲ ನಿಯಂತ್ರಣ ಸಮಿತಿ ತಮಿಳುನಾಡಿಗೆ ಇನ್ನೂ 18 ದಿನಗಳ ಕಾಲ ನಿತ್ಯವೂ 3,000 ಕ್ಯೂಸೆಕ್ ಹರಿಸಲು ಕರ್ನಾಟಕಕ್ಕೆ ಇಂದು ಆದೇಶ ನೀಡಿದೆ. ಇದು ನಿಜಕ್ಕೂ ಆಘಾತಕಾರಿ, ಕಾವೇರಿ ಮತ್ತು ಕನ್ನಡಿಗರ ಪಾಲಿಗೆ ಮರಣ ಶಾಸನ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಹೇಳಿಕೆ ನೀಡಿರುವ ಅವರು, ಕಾವೇರಿ ಕೊಳ್ಳ ಮತ್ತು ಬೆಂಗಳೂರು ನಗರದ ಜನರ ಕತ್ತು ಹಿಚುಕುವುದಕ್ಕೆಂದೇ ಕಾಂಗ್ರೆಸ್ ಸರ್ಕಾರ ಬಂದಿದೆಯೇನೋ ಎಂದು ಬಹಳ ನೋವಿನಿಂದ ಹೇಳಲೇಬೇಕಾಗಿದೆ ಎಂದಿದ್ದಾರೆ.

ಕೆಆರ್ ಎಸ್ ಜಲಾಶಯಕ್ಕೆ ನಿತ್ಯವೂ 10,000 ಕ್ಯೂಸೆಕ್ ಒಳಹರಿವು ಇದೆ ಎನ್ನುತ್ತಾರೆ ಜಲ ಸಂಪನ್ಮೂಲ ಸಚಿವರು. ಇದಕ್ಕೆ ತದ್ವಿರುದ್ಧವಾಗಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ನಮ್ಮಲ್ಲಿ ನೀರೇ ಇಲ್ಲ ಎಂಬ ಮಾಹಿತಿ ನೀಡುತ್ತಾರೆ.

ಇನ್ನೊಂದೆಡೆ ಹಿರಿಯ ಅಧಿಕಾರಿಯೊಬ್ಬರು ಈ ಆದೇಶದಿಂದ ರಾಜ್ಯಕ್ಕೆ 2.5 ಟಿಎಂಸಿ ನೀರು ಉಳಿತಾಯವಾಗಿದೆ ಎನ್ನುತ್ತಾರೆ. 'ಎತ್ತು ಏರಿಗೆ, ಕೋಣ ನೀರಿಗೆ' ಎನ್ನುವಂತಿದೆ ಜಲ ಸಂಪನ್ಮೂಲ ಇಲಾಖೆ ಮತ್ತು ಸರ್ಕಾರದ ಪರಿಸ್ಥಿತಿ. ಹೆಜ್ಜೆಹೆಜ್ಜೆಗೂ ಅನರ್ಥಗಳನ್ನೇ ಮಾಡುತ್ತಿರುವ ಈ ಸರ್ಕಾರದ ವೈಫಲ್ಯದ ಲಾಭವನ್ನು ತಮಿಳುನಾಡು ಅತ್ಯಂತ ಜಾಣತನದಿಂದ ಪಡೆದುಕೊಳ್ಳುತ್ತಿದೆ ಎಂದು ಕುಮಾರಸ್ವಾಮಿ ಟೀಕಿಸಿದರು.

# ನಗರದಲ್ಲಿ ಇಂದು ವಿಶ್ವ ಪ್ರವಾಸೋದ್ಯಮ ದಿನಾಚರಣೆ

ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಇಂದು ಬೆಳಿಗ್ಗೆ 11 ಕ್ಕೆ ಎಸ್.ಎಸ್ ಕನ್ವೇಂನ್ಷನ್ ಸೆಂಟರ್‌ನ ಪಾರ್ವತಿ ಪರ್ಲ್ ಮಿನಿ ಹಾಲ್‌ನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 2020-26 ನೇ ಪ್ರವಾಸೋದ್ಯಮ ನೀತಿಯಲ್ಲಿ ಲಭ್ಯವಿರುವ ಇಲಾಖೆಯ ಯೋಜನೆಗಳ ಕುರಿತು ಕಾರ್ಯಾಗಾರ ನಡೆಯಲಿದೆ. ಕಾರ್ಯಾಗಾರವನ್ನು 'ಟೂರಿಸಮ್ ಅಂಡ್ ಗ್ರೀನ್ ಇನ್ವೆಸ್ಟ್‌ಮೆಂಟ್' ಎಂಬ ಸಂದೇಶದೊಂದಿಗೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ, ಪ್ರವಾಸೋದ್ಯಮ ಇಲಾಖೆಯಲ್ಲಿ ತೊಡಗಿರುವ ಭಾಗಿದಾರರ ಹಾಗೂ ಹೂಡಿಕೆದಾರರ ಸಹಭಾಗಿತ್ವದಲ್ಲಿ ಆಚರಿಸಲಾಗುತ್ತಿದೆ.

# ಎಲೆಬೇತೂರು ಸರ್ಕಾರಿ ಶಾಲೆಯಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕಿಯರಿಗೆ ಸನ್ಮಾನ



ಎಲೆಬೇತೂರು, ಸೆ. 24 - ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿಯರಾದ ಎನ್. ಗಂಗಮ್ಮ ಮತ್ತು ಆರ್. ಅನ್ನಪೂರ್ಣ ಅವರುಗಳು ದಾವಣಗೆರೆ ಉತ್ತರ ವಲಯದ 2023-24ನೇ ಸಾಲಿನ 'ಜಿಲ್ಲಾ ಅತ್ಯುತ್ತಮ ಶಿಕ್ಷಕಿ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇವರಿಗೆ ಶಾಲಾಭಿವೃದ್ಧಿ ಸಮಿತಿ ಮತ್ತು ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಅಭಿನಂದಿಸಿ, ಗೌರವಿಸಿ, ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಿಜಯಕುಮಾರ್, ಮುಖ್ಯೋಪಾಧ್ಯಾಯರಾದ ಶ್ರೀಮತಿ ಸುಜಾತ, ಗ್ರಾ.ಪಂ. ಮಾಜಿ ಅಧ್ಯಕ್ಷೆ ಶ್ರೀಮತಿ ಸುಮ ವಿರೂಪಾಕ್ಷಪ್ಪ, ಶಿಕ್ಷಣ ಪ್ರೇಮಿ ಹಾಗೂ ಕ.ಸಾ.ಪ. ನಿರ್ದೇಶಕ ಎಂ. ಷಡಕ್ಷರಪ್ಪ, ಶಾಲಾಭಿವೃದ್ಧಿ ಸಮಿತಿ ಮಾಜಿ ಅಧ್ಯಕ್ಷ ಆರ್. ನಾಗರಾಜ್, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಡಿ.ಟಿ. ಕೃಷ್ಣಮೂರ್ತಿ, ನಿವೃತ್ತ ಮುಖ್ಯೋಪಾಧ್ಯಾಯರಾದ ಎಂ. ಶಿವಮೂರ್ತಿ, ನಾಗರಾಜ್, ಶಿಕ್ಷಕರಾದ ಎ.ಆರ್. ಗೋಪಾಲಪ್ಪ ಶಶಿಕುಮಾರ್ ಹಾಗೂ ಶಾಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ನಿರೂಪಣೆ ಸಹಶಿಕ್ಷಕಿ ಶ್ರೀಮತಿ ವಾಣಿ, ಪ್ರಾರ್ಥನೆಯನ್ನು ವಿದ್ಯಾರ್ಥಿನಿ ಅಂಜಲಿ, ಸ್ವಾಗತವನ್ನು ಮುಖ್ಯಶಿಕ್ಷಕಿ ಶ್ರೀಮತಿ ಸುಜಾತ, ವಂದನಾರ್ಪಣೆಯನ್ನು ಸಹಶಿಕ್ಷಕಿ ವಸಂತ ನಿರ್ವಹಿಸಿದರು.

# ಮಹಾನಗರ ಪಾಲಿಕೆ ವಿಭಾಗೀಯ ಕಚೇರಿ ಸ್ಥಳಾಂತರಕ್ಕೆ ಆಗ್ರಹ

ದಾವಣಗೆರೆ, ಸೆ. 26 - ಮಹಾನಗರ ಪಾಲಿಕೆ ಆವರಣದಲ್ಲಿದ್ದ ಕಂದಾಯ ಇಲಾಖೆಯ ವಿಭಾಗವನ್ನು ರಾಷ್ಟ್ರೀಯ ಹೆದ್ದಾರಿಯ ಜಿಲ್ಲಾ ಪಂಚಾಯತ್ ಎದುರಿನ ಸರ್ಕ್ಯೂಟ್ ಹೌಸ್ ಪಕ್ಕಕ್ಕೆ ಸ್ಥಳಾಂತರಿಸಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗಿದ್ದು, ಕಾರಣ ಕಂದಾಯ ಇಲಾಖೆಯ ವಿಭಾಗವನ್ನು ಮತ್ತೆ ಮಹಾನಗರ ಪಾಲಿಕೆ ಆವರಣಕ್ಕೆ ಸ್ಥಳಾಂತರ ಮಾಡುವಂತೆ ಆಗ್ರಹಿಸಿ, ಶ್ರೀ ಆಂಜನೇಯ ಮಿಲ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷ ಹೆಚ್.ಜಿ.ಉಮೇಶ್ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಮಾಡಿದ್ದಾರೆ.

ಈ ಕುರಿತ ಮನವಿಯೊಂದನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ನೀಡಿದ್ದು, ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು, ಈ ಕುರಿತು ಪಾಲಿಕೆ ಆಯುಕ್ತರಿಗೆ ಸೂಕ್ತ ನಿರ್ದೇಶನ ನೀಡುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೇ ಈ ಕುರಿತು ಪಾಲಿಕೆ ಆಯುಕ್ತರೊಂದಿಗೆ ಮಾತನಾಡಿದಾಗ, ಈ ಕುರಿತು ಸಭೆ ಕರೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ ಎಂದು ಉಮೇಶ್ ತಿಳಿಸಿದ್ದಾರೆ.

ಸಾರ್ವಜನಿಕರಿಗೆ, ಸಂಘ, ಸಂಸ್ಥೆಗಳಿಗೆ ಯಾವುದೇ ಮಾಹಿತಿ ನೀಡದೆ ನಗರದ ಹೊರ ವಲಯಕ್ಕೆ ಕಚೇರಿಯನ್ನು ಸ್ಥಳಾಂತರ ಮಾಡಿರುವ ಕಾರಣ ಆವರಗೆರೆ, ಶೇಖರಪ್ಪ ನಗರ, ಬಸಾಪುರ ಸೇರಿದಂತೆ ಇದರ ವ್ಯಾಪ್ತಿಗೆ ಬರುವ ಎಲ್ಲಾ ಸಾರ್ವಜನಿಕರಿಗೆ ತೀವ್ರ ತೊಂದರೆ ಆಗಿದೆ. ಈ ಕಚೇರಿಗೆ ಹೋಗಲು 2 ಇಲ್ಲವೇ 3 ಬಸ್ಸುಗಳನ್ನು ಬದಲಿ ಮಾಡಿಕೊಂಡು ಹೋಗಬೇಕು. ಅಲ್ಲದೇ ಮಹಾನಗರ ಪಾಲಿಕೆಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಲು ಪದೇ ಪದೇ ಅಲೆದಾಡಲೇ ಬೇಕಾಗಿದೆ. ಅಧಿಕಾರಿ, ಸಿಬ್ಬಂದಿಗಳು ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಕಾರಣ ಸಾರ್ವಜನಿಕರು ಇಷ್ಟೊಂದು ದೂರ ಹೋಗಿ ಕೆಲಸ ಮಾಡಿಕೊಳ್ಳಲು ಪರದಾಡುವಂತಾಗಿದೆ ಎಂದಿದ್ದಾರೆ.

ಕಾರಣ ಜಿಲ್ಲಾ ಉಸ್ತುವಾರಿ ಸಚಿವರು, ಸಾರ್ವಜನಿಕರಿಗೆ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಅನುಕೂಲ ಆಗುವಂತೆ ಮಹಾನಗರ ಪಾಲಿಕೆ ಆವರಣಕ್ಕೆ ಕಂದಾಯ ವಿಭಾಗವನ್ನು ಸ್ಥಳಾಂತರ ಮಾಡುವಂತೆ ಆಗ್ರಹಿಸಿದ್ದಾರೆ.

# ಪುಸ್ತಕ ಓದುವ ಹವ್ಯಾಸ ಬೆಳೆಸುವ ಹೊಣೆಗಾರಿಕೆ ಪೋಷಕರದ್ದು



'ಆಕಾಶಕ್ಕೆ ಏಣಿ' ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪತ್ರಕರ್ತ ರವೀಂದ್ರ ಭಟ್ಟ ಐನಕೈ

ದಾವಣಗೆರೆ, ಸೆ.25- ಮಕ್ಕಳಲ್ಲಿ ಪುಸ್ತಕ, ದಿನಪತ್ರಿಕೆಗಳ ಓದುವ ಹವ್ಯಾಸ ಮೂಡಿಸಬೇಕಾಗಿರುವುದು ಪ್ರತಿಯೊಬ್ಬ ಪೋಷಕರ ಹೊಣೆಗಾರಿಕೆ ಮತ್ತು ಆದ್ಯ ಕರ್ತವ್ಯ ಎಂದು ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಐನಕೈ ತಿಳಿಸಿದರು.

ನಗರದ 'ಜಿಲ್ಲೆ ಸಮಾಚಾರ' ಪತ್ರಿಕಾ ಬಳಗದ ಆಶ್ರಯದಲ್ಲಿ ರೋಟರಿ ಬಾಲಭವನದಲ್ಲಿ ಹಿರಿಯ ಪತ್ರಕರ್ತ ವಿ. ಹನುಮಂತಪ್ಪ ಅವರ ವಿಶಿಷ್ಟ ಲೇಖನಗಳ ಸಂಗ್ರಹದ 'ಆಕಾಶಕ್ಕೆ ಏಣಿ' ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಇಂದಿನ ವಾತಾವರಣದಲ್ಲಿ ಮಕ್ಕಳು ಓದುತ್ತಿ ದ್ದಾರೆ. ಆದರೆ, ಅದು ಮೊಬೈಲ್‌ನಲ್ಲಿ ದಿನಪತ್ರಿಕೆ, ಪುಸ್ತಕ ಮತ್ತಿತರೆ ಸಾಹಿತ್ಯ ಓದುವುದರಿಂದ ಜೀವನಕ್ಕೆ ಆಗುವಂತಹ ಅನುಕೂಲ, ಅನುಭವದ ಬಗ್ಗೆ ಜಾಗೃತಿ, ಅರಿವು ಮೂಡಿಸಿ ಓದುವಿಕೆಯ ಹವ್ಯಾಸ ಬೆಳೆಸುವಂತಾಗಬೇಕು. ಓದಿನಿಂದಲೇ ಉತ್ತಮ ಜೀವನದ ಅನುಭವ ಎಂಬುದನ್ನು ಕಟ್ಟಿಕೊಡಬೇಕು ಎಂದು ಆಶಿಸಿದರು.

ಆಧುನಿಕತೆಯ ಭರಾಟೆಯಲ್ಲಿ ಮಕ್ಕಳ ಕೈಯಲ್ಲಿ ಮೊಬೈಲ್ ಎನ್ನುವುದು ಅತೀ ಸಾಮಾನ್ಯ ಎನ್ನುವಂತಾಗುತ್ತಿದೆ. ಮೊಬೈಲ್ ನಲ್ಲೇ ಮಗ್ನರಾಗುತ್ತಿರುವ ಮಕ್ಕಳು, ಪೋಷಕರು ಏನು ಮಾಡುತ್ತಾರೆ. ಏನನ್ನು ಅನುಸರಣೆ ಮಾಡಬೇಕು ಎಂಬುದರಿಂದಲೇ ದೂರವಾಗುತ್ತಿದೆ. ಹಾಗಾಗಿ ಮಕ್ಕಳಲ್ಲಿ ಓದುವಿಕೆಯ ಬಗ್ಗೆ ಆಸಕ್ತಿ ಬೆಳೆಸಬೇಕು ಎಂದು ತಿಳಿಸಿದರು.

ಹಿಂದೆ ಒಂದೇ ಮನೆಯಲ್ಲೇ ಹತ್ತಾರು ಜನರು ಇರುತ್ತಿದ್ದರು. ಆಗ ಹೊಂದಾಣಿಕೆ, ಸಹನೆ, ಸಂಯಮ, ವಿವೇಕ ಎಲ್ಲವೂ ಕಂಡು ಬರುತ್ತಿತ್ತು. ಈಗ ಗಂಡ-ಹೆಂಡತಿ ಒಂದಿಬ್ಬರು ಮಕ್ಕಳ ಕುಟುಂಬಗಳಲ್ಲೂ ವಿಘಟನೆಯೇ ಹೆಚ್ಚಾಗಿ ಕಂಡು ಬರುತ್ತಿದೆ. ಮಕ್ಕಳಲ್ಲೇ ನನ್ನದು ಎಂಬ ಭಾವನೆ ಬಲವಾಗಿ ಬೇರೂರುತ್ತಿದೆ. ತಂದೆ-ತಾಯಿಗಳೇ ತಮ್ಮ ವಸ್ತುಗಳನ್ನು ಬಳಕೆ ಮಾಡುವುದನ್ನು ಇಷ್ಟಪಡದಂತಹ ಆತಂಕಕಾರಿ ವಾತಾವರಣ ನಿರ್ಮಾಣವಾಗುತ್ತಿದೆ. ಆಧುನಿಕ ತಂತ್ರ ಜ್ಞಾನ ಬಳಕೆ ಗೊತ್ತಿಲ್ಲದ ಕಾರಣಕ್ಕೆ ದೊಡ್ಡವರೇ ಮಕ್ಕಳ ಮುಂದೆ ದಡ್ಡರಾಗಿ ಕಾಣುತ್ತಿದ್ದಾರೆ. ಎಲ್ಲದರೊಂದಿಗೆ ಹಿರಿಯರೂ ಸಹ ಒಗ್ಗಿಕೊಳ್ಳಬೇಕು ಎಂದು ತಿಳಿಸಿದರು.

ಗ್ರಂಥಾಲಯ ಇಲಾಖೆ ಉಪನಿರ್ದೇಶಕ ಪಿ.ಆರ್. ತಿಪ್ಪೇಸ್ವಾಮಿ ಮಾತನಾಡಿ, ಗ್ರಂಥಾಲಯ ಇಲಾಖೆಯಿಂದ 40 ಪುಸ್ತಕಗಳನ್ನು ಖರೀದಿ ಮಾಡುವ ಮೂಲಕ ಲೇಖಕರು, ಪ್ರಕಾಶನಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ತಿಳಿಸಿದರು. ವಿ. ಹನುಮಂತಪ್ಪ ಮಾತನಾಡಿ, ಓದುವ ಮತ್ತು ಬರೆಯುವ ಹವ್ಯಾಸವನ್ನು ದೂರ ಮಾಡದೇ ಹತ್ತಿರಕ್ಕೆ ಕರೆದುಕೊಳ್ಳಬೇಕು. ಪುಸ್ತಕಗಳನ್ನು ಕೊಂಡು ಓದುವ ಸಂಸ್ಕೃತಿ ಹೆಚ್ಚಾಗಬೇಕು ಎಂದರು.

ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್ ಅಧ್ಯಕ್ಷತೆ ವಹಿಸಿದ್ದರು. ಅನ್‌ಮೋಲ್ ವಿದ್ಯಾಸಂಸ್ಥೆಯ ಸಂಸ್ಥಾಪಕ ಸಿ.ಜಿ. ದಿನೇಶ್, ಪತ್ರಿಕಾ ಬಳಗದ ಅಧ್ಯಕ್ಷೆ ಸತ್ಯಭಾಮ ಮಂಜುನಾಥ್, ಸಾಲಿಗ್ರಾಮ ಗಣೇಶ್ ಶೆಣೈ, ಎಚ್. ಭಾರತಿ, ಎಚ್. ವೆಂಕಟೇಶ, ಎನ್. ಕೆ. ಕೊಟ್ರೇಶ್ ಇತರರು ಇದ್ದರು. ಡಾ.ಸಿ.ಕೆ. ಆನಂದತೀರ್ಥಾಚಾರ್ ಸ್ವಾಗತಿಸಿದರು. ಎನ್. ಟಿ. ಎರ್ರಿಸ್ವಾಮಿ ವಂದಿಸಿದರು.

# ವಿಜಯನಗರ ಕ್ರೆಡಿಟ್ ಸೊಸೈಟಿಗೆ 40 ಲಕ್ಷ ಲಾಭ



ದಾವಣಗೆರೆ, ಸೆ. 26 - ನಗರದ ವಿಜಯನಗರ ಕ್ರೆಡಿಟ್ ಕೋ-ಆಪ್. ಸೊಸೈಟಿ 2022-23ನೇ ಸಾಲಿನಲ್ಲಿ 40,31,711.28 ರೂ. ಲಾಭ ಗಳಿಸಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಸೊಸೈಟಿ ಅಧ್ಯಕ್ಷ ಜೆ.ಚೆಲುವಪ್ಪ ಸಂತಸ ವ್ಯಕ್ತಪಡಿಸಿದರು.

ಶ್ರೀ ಕೃಷ್ಣ ಭವಾನಿ ಸಭಾ ಭವನದಲ್ಲಿ ನಡೆದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಸೊಸೈಟಿ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿದ್ದು, ಇದಕ್ಕೆ ಆಡಳಿತ ಮಂಡಳಿ ಸದಸ್ಯರ ಸಹಕಾರ, ಸಿಬ್ಬಂದಿ ವರ್ಗದವರ ಶ್ರಮ ಕಾರಣ ಎಂದು ಶ್ಲಾಘಿಸಿದರು.

ಪ್ರಸಕ್ತ ಸಾಲಿನಲ್ಲಿ 3518 ಸದಸ್ಯರು ಇದ್ದು, ಸೊಸೈಟಿಯು ರೂ. 1,15,13,000 ಷೇರು ಬಂಡವಾಳ ಹೊಂದಿದೆ. ರೂ. 24.78 ಕೋಟಿ ಠೇವಣಿ ಇದ್ದು, ರೂ.19.10 ಕೋಟಿ ಸಾಲ ನೀಡಲಾಗಿದೆ. ಮರಣ ಹೊಂದಿದ ಸಂಘದ ಸದಸ್ಯರ ಅಂತ್ಯಕ್ರಿಯೆಗೆ ನೆರವಾಗುವ ಉದ್ದೇಶದಿಂದ ಮೃತರ ವಾರಸುದಾರರಿಗೆ 4000 ರೂ. ಗಳನ್ನು ವಿತರಿಸಲಾಗುತ್ತಿದೆ. ಶಸ್ತ್ರಚಿಕಿತ್ಸೆಗೆ ಒಳಗಾದ ಸಂಘದ ಸದಸ್ಯರು ಅಗತ್ಯ ದಾಖಲೆ ನೀಡಿದಲ್ಲಿ, ಸಹಾಯ ಧನ ನೀಡಲು ತೀರ್ಮಾನಿಸಲಾಗಿದೆ ಎಂದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಇ-ಸ್ಟಾಂಪಿಂಗ್ ವ್ಯವಸ್ಥೆ, ಸಂಘದಿಂದ ಸಾಲ ಪಡೆದ ಸದಸ್ಯರುಗಳಿಗೆ ರೂ. 20,000 ಗಳ ವಿಮೆ ಮಾಡಿಸಲಾಗುತ್ತಿದೆ. ಸಂಘದ ಸಂಪೂರ್ಣ ವ್ಯವಹಾರವನ್ನು ಗಣಕೀಕೃತ ಗೊಳಿಸಲಾಗಿದೆ.

ಈ ಬಾರಿ ಷೇರುದಾರರಿಗೆ ಶೇ.14 ಡಿವಿಡೆಂಡ್ ನೀಡಲು ನಿರ್ಧರಿಸಲಾಗಿದೆ. ಸಂಘದ ಕಛೇರಿಗೆ ನಿವೇಶನ ಅಥವಾ ಸ್ವಂತ ಕಟ್ಟಡದ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎನ್.ಜಿ. ಮೋಹನ್, ನಿರ್ದೇಶಕರುಗಳಾದ ಜಿ.ಕೆ. ಶಿವಾನಂದ, ಹೆಚ್.ಬಿ.ಗೋಣಪ್ಪ, ಬಿ.ರಮೇಶ್ (ಪಿ.ಜೆ.), ವಿ.ಮಂಜುನಾಥ, ರಮೇಶ್.ಬಿ., ಎನ್.ನಿಂಗಪ್ಪ, ಶ್ರೀಮತಿ ಹೆಚ್.ಸಿ.ವಾಣಿ, ಶ್ರೀಮತಿ ಸುನಂದ, ಡಿ.ಬಿ.ಚಂದ್ರಪ್ಪ, ವಿಶೇಷ ಆಹ್ವಾನಿತರಾದ ಎಸ್. ರವಿಸ್ವಾಮಿ, ಶ್ರೀಮತಿ ವಂದನಾ, ಕಾರ್ಯದರ್ಶಿ ದಯಾನಂದ ದೊಡ್ಡಮನಿ, ಸಿಬ್ಬಂದಿ ವರ್ಗದವರು ಹಾಗೂ ಷೇರುದಾರರು ಉಪಸ್ಥಿತರಿದ್ದರು.

# ಪ್ರಯಾಣಿಕರ ಅಭಿಪ್ರಾಯದಂತೆ ವಂದೇ ಭಾರತ್ ರೈಲುಗಳಲ್ಲಿ ಬದಲಾವಣೆ

ಉದಯ್‌ಪುರ್, ಸೆ. 26 – ಈ ಹಿಂದಿನ ವಂದೇ ಭಾರತ್ ರೈಲುಗಳ ಪ್ರಯಾಣಿಕರು ನೀಡಿದ ಸಲಹೆಗಳನ್ನು ಆಧರಿಸಿ, ಭಾನುವಾರ ಚಾಲನೆ ನೀಡಲಾದ ಒಂಭತ್ತು ರೈಲುಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ಸೀಟುಗಳ ಅಳವಡಿಕೆ, ವಾಷ್ ಬೇಸಿನ್ ಸೇರಿದಂತೆ ಹಲವು ವಿಷಯಗಳಲ್ಲಿ ಬದಲಾವಣೆ ಮಾಡಲಾಗಿದೆ. ಬೋಗಿಗಳ ಉತ್ಪಾದಕರು ಅತ್ಯಂತ ಸೂಕ್ಷ್ಮ ವಿಷಯಗಳ ಬಗ್ಗೆಯೂ ಗಮನ ಹರಿಸಿದ್ದಾರೆ.

ಗಾಲಿ ಕುರ್ಚಿಗಳಲ್ಲಿ ಬರುವ ದಿವ್ಯಾಂಗರಿಗೆ ಅನುಕೂಲ ಕಲ್ಪಿಸಲಾಗಿದೆ. ಕಾಸರಗೋಡಿನಿಂದ ತಿರುವನಂತಪುರದ ನಡುವೆ ಸಂಚರಿಸುವ ವಂದೇ ಭಾರತ್ ರೈಲಿಗೆ ಮೊದಲ ಬಾರಿಗೆ ಕಿತ್ತಳೆ ಬಣ್ಣವನ್ನು ಬಳಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ಮುಂದಿನ ಎರಡು ತಿಂಗಳಲ್ಲಿ ಇನ್ನೂ ಎರಡು ಕಿತ್ತಳೆ ಬಣ್ಣದ ರೈಲುಗಳು ಕಾರ್ಯಾರಂಭ ಮಾಡಲಿವೆ.


# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ–583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ–577 004**

**ಫೋನ್: 08192 - 233632, 233494,233843, 223913 ಫ್ಯಾಕ್ಸ್: 08192-230231**

## ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ಚಿನ್ನಾಭರಣಗಳ ಮೌಲ್ಯಮಾಪಕರು ಬೇಕಾಗಿದ್ದಾರೆ.

ನಮ್ಮ ಶಾಖೆಗಳಲ್ಲಿ ಚಿನ್ನಾಭರಣಗಳ ಮೇಲೆ ಸಾಲ ನೀಡುತ್ತಿದ್ದು ಸದರಿ ಆಭರಣಗಳನ್ನು ಮೌಲ್ಯೀಕರಿಸಿ ದೃಢಪಡಿಸಲು ಆಭರಣಗಳ ಮೌಲ್ಯಮಾಪಕರ ಅವಶ್ಯಕತೆ ಇರುತ್ತದೆ. ಆದ್ದರಿಂದ ಬ್ಯಾಂಕಿನ ನಿಯಮ ಮತ್ತು ನಿಬಂಧನೆಗಳಿಗೊಳ –ಪಟ್ಟು ಕಾರ್ಯ ನಿರ್ವಹಿಸಲು ಆಸಕ್ತಿಯುಳ್ಳ ಆಭರಣ ಮೌಲ್ಯಮಾಪಕರು ತಮ್ಮ ಸಂಪೂರ್ಣ ವಿವರಗಳೊಂದಿಗೆ ಸಂಬಂಧಪಟ್ಟ ಶಾಖೆಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಆಭರಣಗಳ ಮೌಲ್ಯಮಾಪಕರಿಗಿರಬೇಕಾದ ಅರ್ಹತೆಗಳು ಈ ಕೆಳಗಿನಂತಿವೆ. :

* ಮೌಲ್ಯಮಾಪಕರ ವಯೋಮಿತಿ ಕನಿಷ್ಠ 23 ವರ್ಷ ಹಾಗೂ ಗರಿಷ್ಠ 60 ವರ್ಷ ಆಗಿರಬೇಕು.
* ಮೌಲ್ಯಮಾಪಕರು ಚಿನ್ನಾಭರಣಗಳ ಮೌಲ್ಯಮಾಪನ/ನಿರ್ವಹಣೆಯಲ್ಲಿ ಕಡ್ಡಾಯವಾಗಿ 5 ವರ್ಷಗಳ ಅನುಭವವನ್ನು ಹೊಂದಿರಬೇಕು. ಮತ್ತು ಚಿನ್ನಾಭರಣಗಳ ಮೌಲ್ಯಮಾಪಕರ ಸಂಘದಿಂದ ಪಡೆದ ಅನುಭವ ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.
* ಮೌಲ್ಯಮಾಪಕರು ಶೈಕ್ಷಣಿಕವಾಗಿ ಕನಿಷ್ಠ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
* ಮೌಲ್ಯಮಾಪಕರು ಶೈಕ್ಷಣಿಕ ಮತ್ತು ಜನ್ಮ ದಿನಾಂಕದ ಪುರಾವೆಗಳನ್ನು ಒದಗಿಸತಕ್ಕದ್ದು.
* ಮೌಲ್ಯಮಾಪಕರು ಸಂಬಂಧಪಟ್ಟ ಆರಕ್ಷಕ ಠಾಣೆಯಿಂದ ಪ್ರಮಾಣ ಪತ್ರವನ್ನು ಹೊಂದಿರಬೇಕು.
* ಮೌಲ್ಯಮಾಪಕರ ಸಂಪೂರ್ಣ ವಿವರಗಳನ್ನು ಭರ್ತಿ ಮಾಡಿರುವ ಅರ್ಜಿಯನ್ನು ದಿನಾಂಕ : 10–10–2023ರ ಒಳಗಾಗಿ ಸಂಬಂಧಪಟ್ಟ ಶಾಖೆಗೆ ಒದಗಿಸಬೇಕು.

**ಮೌಲ್ಯಮಾಪಕರ ಅವಶ್ಯಕತೆ ಇರುವ ಶಾಖೆಗಳ ವಿವರ ಈ ಕೆಳಕಂಡಂತಿದೆ.**

| ಕ್ರಮ ಸಂಖ್ಯೆ | ಶಾಖೆಯ ಹೆಸರು | ತಾಲ್ಲೂಕು | ಜಿಲ್ಲೆ | ಸಂಪರ್ಕಿಸಲು ಶಾಖಾ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ |
|---|---|---|---|---|
| 01 | ಅತ್ತಿಗೆರೆ | ದಾವಣಗೆರೆ | ದಾವಣಗೆರೆ | 9448545655 |
| 02 | ಬೆಳ್ಳೂಡಿ | ಹರಿಹರ | ದಾವಣಗೆರೆ | 9739664569 |
| 03 | ದೇವರಬೆಳಕೆರೆ | ಹರಿಹರ | ದಾವಣಗೆರೆ | 7760837376 |
| 04 | ದೇವಿಗೆರೆ | ಜಗಳೂರು | ದಾವಣಗೆರೆ | 9164477129 |
| 05 | ಹೊಸಕೆರೆ | ಜಗಳೂರು | ದಾವಣಗೆರೆ | 9739315810 |
| 06 | ಜಗಳೂರು | ಜಗಳೂರು | ದಾವಣಗೆರೆ | 9380473722 |
| 07 | ಕಕ್ಕರಗೊಳ್ಳ | ದಾವಣಗೆರೆ | ದಾವಣಗೆರೆ | 8971388367 |
| 08 | ಕಂದನಕೋವಿ | ದಾವಣಗೆರೆ | ದಾವಣಗೆರೆ | 8496847090 |
| 09 | ಕೊಡಗನೂರು | ದಾವಣಗೆರೆ | ದಾವಣಗೆರೆ | 8328332612 |
| 10 | ಮಲ್ಲಾಪುರ | ಜಗಳೂರು | ದಾವಣಗೆರೆ | 9030111373 |
| 11 | ಮುಸ್ಟೂರು | ಜಗಳೂರು | ದಾವಣಗೆರೆ | 9008882730 |
| 12 | ಸೊಕ್ಕೆ | ಜಗಳೂರು | ದಾವಣಗೆರೆ | 7019896889 |
| 13 | ತೋರಣಗಟ್ಟ | ಜಗಳೂರು | ದಾವಣಗೆರೆ | 9014302619 |
| 14 | ವಾಸನ | ಹರಿಹರ | ದಾವಣಗೆರೆ | 9483115830 |
| 15 | ಲಿಂಗಾಪುರ | ಹೊನ್ನಾಳಿ | ದಾವಣಗೆರೆ | 8919017899 |
| 16 | ನಲ್ಲೂರು | ಚನ್ನಗಿರಿ | ದಾವಣಗೆರೆ | 9945994144 |
| 17 | ಶಾಮನೂರು | ದಾವಣಗೆರೆ | ದಾವಣಗೆರೆ | 9964180912 |

ಸ್ಥಳ : ದಾವಣಗೆರೆ
ದಿನಾಂಕ : 25–09–2023

ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು, ಪ್ರಾದೇಶಿಕ ಕಛೇರಿ.
ಕರ್ನಾಟಕ ಗ್ರಾಮೀಣ ಬ್ಯಾಂಕ್, ದಾವಣಗೆರೆ.

# ವಿನೋಬನಗರ ಗಣಪತಿ ಅದ್ಧೂರಿ ಮೆರವಣಿಗೆ

**(1ನೇ ಪುಟದಿಂದ)** ಇಲ್ಲಿ ಎಲ್ಲಾ ಜಾತಿ, ಧರ್ಮದವರೂ ಸೇರಿ ಮೆರವಣಿಗೆ ನಡೆಸುವುದು ಖುಷಿಯ ವಿಚಾರ ಎಂದರು.

ಸಮಾಳ, ವೀರಗಾಸೆ, ಡೊಳ್ಳು, ನಂದಿಕೋಲು, ನಾಸಿಕ್ ಡೋಲು ಮೊದಲಾದ ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಮೆರವಣಿಗೆ ಆರಂಭದಲ್ಲಿ ಮಳೆಯ ಸಿಂಚನ ಯುವಕರ ಉತ್ಸಾಹ ಹೆಚ್ಚಿಸಿತ್ತು. ಡಿಜೆ ಸದ್ದಿಗೆ ಯುವ ಪಡೆ ಭರ್ಜರಿ ನೃತ್ಯ ಮಾಡಿತು. ಜನರು ಮನೆಗಳ ಮಹಡಿ, ಕಟ್ಟಡಗಳು, ಕಾಂಪೌಂಡ್‌ಗಳನ್ನು ಏರಿ ಮೆರವಣಿಗೆ ವೀಕ್ಷಿಸಿದರು. ಮೆರವಣಿಗೆಯಲ್ಲಿ ಯುವಕರು ಕೇಸರಿ ಬಣ್ಣದ ರುಮಾಲು ಧರಿಸಿ, ಸೆಲ್ಫಿ ತೆಗೆಸಿಕೊಳ್ಳುತ್ತಿದ್ದರು.

2ನೇ ಮುಖ್ಯ ರಸ್ತೆಯಲ್ಲಿರುವ ಮಸೀದಿಯ ಎದುರು ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಮುಂಜಾಗ್ರತೆಯಾಗಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಡಿಜೆ ಹಾಡಿಗೆ ನೃತ್ಯ ಮಾಡುತ್ತಿದ್ದ ಯುವಕರನ್ನು ಮುಂದೆ ಕಳುಹಿಸಲು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹರಸಾಹಸಪಟ್ಟರು.

ಮುನ್ನೆಚ್ಚರಿಕೆ ಕ್ರಮವಾಗಿ ಅಲ್ಲಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಡ್ರೋಣ್ ಕ್ಯಾಮೆರಾದ ಮೂಲಕವೂ ಹದ್ದಿನ ಕಣ್ಣು ಇಡಲಾಗಿತ್ತು. ಪೊಲೀಸರು ಹ್ಯಾಂಡಿ ಕ್ಯಾಮ್‌ಗಳ ಮೂಲಕವೇ ದೃಶ್ಯಗಳನ್ನು ಸೆರೆಹಿಡಿಯುತ್ತಿದ್ದರು.

ವಿನೋಬ ನಗರ 2ನೇ ಮುಖ್ಯ ರಸ್ತೆಯಿಂದ ಆರಂಭವಾದ ಮೆರವಣಿಗೆಯು ಮಸೀದಿ ಮುಖಾಂತರ ಪಿಬಿ ರಸ್ತೆ, ಕಿತ್ತೂರು ರಾಣಿ ಚನ್ನಮ್ಮ ವೃತ್ತ, ಹರಳೆಣ್ಣೆ ಕೊಟ್ರಬಸಪ್ಪ ವೃತ್ತ, ಎಂ.ಸಿ ಕಾಲೋನಿ ಎ ಬ್ಲಾಕ್ ಮುಖಾಂತರ ಮರಳಿ ವಿನೋಬ ನಗರ 1ನೇ ಮುಖ್ಯ ರಸ್ತೆಯಲ್ಲಿರುವ ಚೌಡೇಶ್ವರಿ ದೇವಸ್ಥಾನದ ಮುಂದೆ ಸಾಗಿ, ಪಿಬಿ ರಸ್ತೆಗೆ ತಲುಪಿ ಕಾಡಪ್ಪನ ಕಣದಲ್ಲಿರುವ ಬಾವಿಯಲ್ಲಿ ಗಣಪತಿ ಮೂರ್ತಿಯನ್ನು ವಿಸರ್ಜಿಸಲಾಯಿತು. ಇದೇ ವೇಳೆ ವಿನೋಬನಗರ ಮಸೀದಿ ಬಳಿ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾರ ಹಾಕಿ ಮೆರವಣಿಗೆಗೆ ಸ್ವಾಗತಿಸಿದರು.

ಮೆರವಣಿಗೆ ಮೇಳೆ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರೊಂದಿಗೆ ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಪಾಲಿಕೆ ಸದಸ್ಯ ಎ. ನಾಗರಾಜ್, ಸಮಿತಿ ಗೌರವಾಧ್ಯಕ್ಷ ದೇವರಮನೆ ಶಿವರಾಜ್, ಅಧ್ಯಕ್ಷ ಗುರುನಾಥ ಬಾಬು, ಕಾರ್ಯದರ್ಶಿ ಡಿ.ಕೆ. ರಮೇಶ್, ಉಪಾಧ್ಯಕ್ಷ ನಾಗರಾಜ ಗೌಡ, ಮಂಜುನಾಥ ಮತ್ತು ಇತರರು ಇದ್ದರು.

# ತಾಲ್ಲೂಕು ದಸರಾ ಕ್ರೀಡಾಕೂಟ ಜಿಎಂಐಟಿ ವಿದ್ಯಾರ್ಥಿಗಳ ಸಾಧನೆ



ದಾವಣಗೆರೆ,ಸೆ.26- ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಜಿ. ಎಂ. ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ. ರಕ್ಷಿತ ಹೆಚ್. ಬಿ (100ಮೀ ಓಟ ದ್ವಿತೀಯ), ಹಾಲೇಶ್ ಕುಮಾರ ಕೆ.ಜಿ (100 ಮೀ-ಪ್ರಥಮ ಮತ್ತು 4x100ಮೀ ರಿಲೇ ದ್ವಿತೀಯ), ಅಕ್ಷಯ್ ಎಸ್.ಕೆ (100 ಮೀ-ದ್ವಿತೀಯ, 200ಮೀ ಪ್ರಥಮ & 4x100ಮೀ ರಿಲೇ ದ್ವಿತೀಯ), ಮನೋಜ್ ಬಿ.ಎಮ್(4x100ಮೀ ರಿಲೇ ದ್ವಿತೀಯ) ಮತ್ತು ತೇಜಸ್ ವಿ.ಎಂ.(4x100ಮೀ ರಿಲೇ ದ್ವಿತೀಯ) ಸ್ಥಾನ ಪಡೆದಿದ್ದಾರೆ.

# 18 ದಿನ ಮೂರು ಸಾವಿರ ಕ್ಯೂಸೆಕ್ಸ್ ನೀರು

**(1ನೇ ಪುಟದಿಂದ)** ಮಾಡಿ ಮತ್ತೊಂದು ಆದೇಶ ಹೊರಡಿಸಿದ್ದಾರೆ.

ನಮಗೆ ನೀರಿನ ಕೊರತೆ ಇರುವಾಗ ತಮಿಳುನಾಡಿಗೆ ನೀರು ಹರಿಸುವ ಸ್ಥಿತಿಯಲ್ಲಿಲ್ಲ. ನಮ್ಮ ಜಲಾಶಯಗಳಿಂದ ಯಾವುದೇ ಹರಿವನ್ನು ಅಂತರ್‌ರಾಜ್ಯ ಗಡಿಯಾದ ಬಿಳಿಗುಂಡ್ಲುವಿನ ನಿರ್ವಹಿಸಬೇಕಾದ ಹರಿವುಗಳಿಗೆ ಕೊಡುಗೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ಪ್ರತಿಯಾಗಿ ವಾದ ಮಂಡಿಸಿದ ತಮಿಳುನಾಡು ಕರ್ನಾಟಕವೂ ಸಹ ಸಂಕಷ್ಟದ ಅನುಪಾತದ ಆಧಾರದ ಮೇಲೆ ನೀರಾವರಿ ಪ್ರದೇಶ ಕಡಿಮೆ ಮಾಡಬೇಕು. ಆದರೆ, ತಕ್ಷಣವೇ ಕೊರತೆ ಇರುವ ನೀರು ಬಿಡುಗಡೆ ಮಾಡಬೇಕು. ಸಂಕಷ್ಟದ ಅನುಪಾತದ ಆಧಾರದ ಮೇಲೆ ಮತ್ತಷ್ಟು ನೀರು ಬಿಡುಗಡೆ ಮಾಡುವಂತೆ ಅಂದರೆ 16500 ಕ್ಯೂಸೆಕ್ಸ್ ನೀರು ಹರಿಸುವಂತೆ ಸಮಿತಿ ಮುಂದೆ ಮನವಿ ಮಾಡಿತು. ಎರಡೂ ರಾಜ್ಯಗಳ ಅಧಿಕಾರಿಗಳು ಮಂಡಿಸಿದ ವಾದ ಮತ್ತು ಮಾಹಿತಿ ಆಧರಿಸಿ ಅಂತಿಮವಾಗಿ ಸಮಿತಿ ಮೂರು ಸಾವಿರ ಕ್ಯೂಸೆಕ್ಸ್ ನೀರನ್ನು ಅಕ್ಟೋಬರ್ 15ರವರೆಗೂ ತಮಿಳುನಾಡಿಗೆ ಬಿಡುವಂತೆ ಕರ್ನಾಟಕಕ್ಕೆ ಆದೇಶ ಮಾಡಿತು.

# ಶಾಲಾ ಶಿಕ್ಷಣವು ಜೀವನ ಪರೀಕ್ಷೆಗೂ ಬೇಕು

## ಹಿಮಾಲಯನ್ ಅಡ್ವೆಂಚರ್‌ನಿಂದ ಶಿಕ್ಷಕರ ಸನ್ಮಾನದಲ್ಲಿ ಹೆಚ್.ಬಿ. ಮಂಜುನಾಥ್



ದಾವಣಗೆರೆ, ಸೆ.26- ಶಾಲಾ ಶಿಕ್ಷಣವನ್ನು ಕೇವಲ ವಾರ್ಷಿಕ ಪರೀಕ್ಷೆಗಷ್ಟೇ ಬಳಸದೆ ಜೀವನ ಪರೀಕ್ಷೆಯಲ್ಲೂ ಬಳಸಿದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಅಭಿಪ್ರಾಯಪಟ್ಟರು.

ನಗರದ ಸಂತಪೌಲರ ಪದವಿ ಪೂರ್ವ ಕಾಲೇಜಿನಲ್ಲಿ ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ಹಾಗೂ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ವತಿಯಿಂದ ನೆರವೇರಿದ ಶಿಕ್ಷಕರ ದಿನಾಚರಣೆ ಹಾಗೂ ಗೌರವ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಅವರು ಮಾತನಾಡಿದರು.

ಬುದ್ಧಿಮತ್ತೆಯಲ್ಲಿ ಭಾರತದವರು ಜಗತ್ತಿನಲ್ಲೇ ಮುಂದೆಂಬುದು ಅನಾದಿ ಕಾಲದಿಂದಲೂ ತಿಳಿದುಬಂದದ್ದು, ಈಚಿನ ಚಂದ್ರಯಾನದ ಯಶಸ್ಸು ಇದನ್ನು ಮತ್ತಷ್ಟು ಪುಷ್ಟಿಗೊಳಿಸಿದೆ. ಶೀಘ್ರದಲ್ಲೇ ವಿಶ್ವದ ದೊಡ್ಡ ಆರ್ಥಿಕ ಶಕ್ತಿಯಾಗಿ ಪ್ರಕಟಗೊಳ್ಳಲಿರುವ ಭಾರತದ ಯುವಶಕ್ತಿಯು ವಿಶ್ವವನ್ನಾಳುವ ಸಾಮರ್ಥ್ಯವನ್ನು ಹೊಂದಿದ್ದು, ಇದಕ್ಕೆ ಪೂರಕವಾದ ಶಿಕ್ಷಣವನ್ನು ಸಹ ಪಠ್ಯೇತರವಾಗಿ ಶಾಲಾ ಕಾಲೇಜುಗಳು ನೀಡಬೇಕಾದ ಅವಶ್ಯಕತೆ ಇದೆ.

ಶಿಕ್ಷಕರು ಈ ನಿಟ್ಟಿನಲ್ಲೂ ಕಾರ್ಯನಿರ್ವಹಿಸಬಹುದಾಗಿದೆ ಎಂದ ಅವರು, ವಿದ್ಯಾರ್ಥಿಗಳು ಸಹ ಶಾಲಾ ಪರೀಕ್ಷೆಯ ಅಂಕ ಗಳಿಕೆಗೆ ಕೊಡುವಷ್ಟೇ ಪ್ರಾಶಸ್ತ್ಯವನ್ನು ಜೀವನ ಪರೀಕ್ಷೆಯ ಯಶಸ್ಸಿಗೂ ಕೊಡಬೇಕು ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ ಹೆಚ್.ವಿ. ಸೋಮಶೇಖರ್ ಮುಗ್ಧ ಮನದಲ್ಲಿ ಅಕ್ಷರಗಳನ್ನು ಬಿತ್ತಿ ಜ್ಞಾನದ ಬೆಳೆ ಬೆಳೆದು ಸುಂದರ ನಾಡ ನಿರ್ಮಾಣಕ್ಕೆ ಕಾರಣರಾಗುವವರೇ ಶಿಕ್ಷಕರು, ನಮ್ಮ ಚಂದ್ರಯಾನದ ಯಶಸ್ಸಿಗೆ ಕಾರಣರಾದ ವಿಜ್ಞಾನಿಗಳ ಸಾಧನೆಯಲ್ಲಿ ಅವರ ಶಿಕ್ಷಕರುಗಳ ಪಾತ್ರವೂ ಮಹತ್ತರವಾಗಿದೆ ಎಂದರು.

ಮುಖ್ಯ ಅತಿಥಿಯಾಗಿದ್ದ ಸಂತಪೌಲರ ಶೈಕ್ಷಣಿಕ ಸಂಸ್ಥೆಯ ಸ್ಥಳೀಯ ವ್ಯವಸ್ಥಾಪಕಿಯವರಾದ ಸಿಸ್ಟರ್ ಮಾರ್ಜರಿ ಮಾತನಾಡಿ, ಜ್ಞಾನ ದಾನ ಮಾಡುವ ಶಿಕ್ಷಕರಲ್ಲಿ ತಾಳ್ಮೆಯೂ ಬಹಳವಾಗಿ ಬೇಕು. ರೂಪ, ಅಂತಸ್ತು, ಅಧಿಕಾರಗಳಿಂದ ಆಚೆಯ ಜ್ಞಾನಕ್ಕೆ ಬೆಲೆ ಕೊಡಬೇಕು ಎಂದರು.

ಪ್ರಾಚಾರ್ಯ ಕೆ.ಟಿ. ಮೇಘನಾಥ್ ಮಾತನಾಡಿ, ಎಲ್ಲಾ ಸದ್ವಿದ್ಯೆಗಳಲ್ಲಿ ಪಾರಂಗತರಾದವರನ್ನೇ ಹಿಂದಿನ ಗುರುಕುಲಗಳಲ್ಲಿ ಶಿಕ್ಷಕರೆಂದು ಗೌರವಿಸಲಾಗುತ್ತಿತ್ತು ಎಂದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ದಾವಣಗೆರೆ ಜಿಲ್ಲಾಧ್ಯಕ್ಷ ಹಾಗೂ ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಎನ್.ಕೆ. ಕೊಟ್ರೇಶ್ ಪ್ರಾಕೃತಿಕ ವಿಕೋಪಗಳ ಸಂದರ್ಭಗಳಲ್ಲಿ ಜೀವ ರಕ್ಷಣೆಯ ಪ್ರಯೋಜನಕ್ಕೆ ಬರುವ ಸಾಹಸ ಕ್ರೀಡೆಗಳ ಶಿಕ್ಷಣವೂ ಅವಶ್ಯ ಎಂದರು.

ಪತ್ರಕರ್ತ ಚನ್ನಬಸವ ಶೀಲವಂತ್ ನಿರೂಪಿಸಿದ ಕಾರ್ಯಕ್ರಮದಲ್ಲಿ ಶಿಕ್ಷಕರುಗಳಾದ ಆರ್. ವಿಶ್ವನಾಥ, ನೂರ್ ಜಹಾನ್, ಡೆಬೋರಾ ಪಿಯರ್ಸನ್, ರಮೇಶ್ ಎಲಿಗಾರ್, ಶ್ವೇತಾ ಹೆಚ್. ಎನ್., ಎಂ. ಮೇಘನಾ, ಹೆಚ್.ಎಂ. ಸಿಂಧು, ಪಿ.ವಿ. ರೇಗಿನಾ ಇವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ವಿಶೇಷ ಆಹ್ವಾನಿತರಾಗಿ ಅಶೋಕ್ ಭಟ್, ದೀಪು, ನಾಗರಾಜ್, ಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು. ವಿಶ್ವನಾಥ್ ಸ್ವಾಗತಿಸಿದರು. ಸಿಂಧು ವಂದಿಸಿದರು.

# ಎ ಶ್ರೇಣಿಯಲ್ಲಿ ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ



ದಾವಣಗೆರೆ, ಸೆ. 26- ಉತ್ತಮ ಸಹಕಾರದೊಂದಿಗೆ ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ 2022-23 ನೇ ಸಾಲಿನಲ್ಲಿ 23,54,087 ರೂ. ಲಾಭ ಗಳಿಸುವ ಮೂಲಕ 'ಎ' ವರ್ಗದ ಶ್ರೇಣಿಯಲ್ಲಿದೆ ಎಂದು ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ತಿಳಿಸಿದರು.

ನಗರದ ಜಯದೇವ ವೃತ್ತದ ಬಳಿ ಇರುವ ಶ್ರೀ ಶಂಕರ ಭಾರತಿ ಮಂದಿರದಲ್ಲಿ (ಶಂಕರ ಮಠ) ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘದ 7 ನೇ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಆರ್. ವೆಂಕಟಾಚಲಮೂರ್ತಿ ಮಾತನಾಡಿ, 2022-23 ನೇ ಸಾಲಿಗೆ 1108 ಸದಸ್ಯರಿಂದ 17,99,000 ಷೇರು ಬಂಡವಾಳ ಹೊಂದಿದೆ. 7,51,54,250 ಠೇವಣಿ ಸಂಗ್ರಹಿಸಿ, 5,68,44,500 ಸಾಲವನ್ನು ನೀಡಿದೆ. 8,91,53,000 ದುಡಿಯುವ ಬಂಡವಾಳ ಹೊಂದಿದ್ದು, 23,54, 000 ಲಾಭ ಬಂದಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಹರಿಹರ ಪಟ್ಟಣದ ಕು. ಭೂಮಿಕ ಭಾರತೀಯ ನೌಕಾದಳಕ್ಕೆ ಕರ್ನಾಟಕದಿಂದ ಆಯ್ಕೆಯಾಗಿರುವ ಪ್ರಥಮ ಅಭ್ಯರ್ಥಿ ಹಾಗೂ ಬೇಬಿ ನಿಧಿ ಬೇತೂರು ಕರ್ನಾಟಕ ರಾಜ್ಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕರಾಟೆಯಲ್ಲಿ ಭಾಗವಹಿಸಿ ಸಾಧನೆ ಮಾಡಿರುವುದರಿಂದ ಈ ಇಬ್ಬರಿಗೂ ಸಂಸ್ಥೆಯಿಂದ ಸನ್ಮಾನಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಬಿ. ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಜೆ.ಕೆ. ಶಿವಕುಮಾರ್, ನಿರ್ದೇಶಕರಾದ ಮಾರುತಿ, ರುದ್ರಮುನಿ, ಮಹಾಂತೇಶ್, ಮಲ್ಲಿಕಾರ್ಜುನ್ ವಾಲಿ, ರಾಜಪ್ಪ, ಶ್ವೇತಾ, ಆಶಾ ಸಿಬ್ಬಂದಿಯವರಾದ ಚೈತ್ರಾ, ಅರವಿಂದ, ವೀರೇಂದ್ರ, ಪರಶುರಾಮ್ ಹಾಗೂ ಪಿಗ್ಮಿ ಸಂಗ್ರಾಹಕರಿದ್ದಾರೆ.

# ಜಿಲ್ಲೆಯ ರೈತರನ್ನು ಮೂರ್ಖರನ್ನಾಗಿಸುವ ತಂತ್ರ

**(1ನೇ ಪುಟದಿಂದ)** 20 ದಿನ ನೀರು ಹರಿಸಿ 10 ದಿನ ನೀರು ಹರಿಸದಿರುವುದು ಆಫ್ ಅಂಡ್ ಆನ್ ಪದ್ಧತಿಯಾಗಿದೆ. ಇದರಿಂದ ಇಂಟರ್ನಲ್ ರೊಟೇಶನ್ ಸೇರಿ 20 ದಿನ ನೀರು ಸಿಗುವುದಿಲ್ಲ. ಆಗ ಭತ್ತದ ಬೆಳೆ ಒಣಗಿ ನಾಶವಾಗುತ್ತದೆ. ಪ್ರಸ್ತುತ ಈಗ ಸ್ವಲ್ಪ ಪ್ರಮಾಣದಲ್ಲಿ ಮಳೆಯಾಗಿರುವುದರಿಂದ 10 ದಿನ ನೀರು ನಿಲುಗಡೆ ಮಾಡಿದರೂ ಬೆಳೆ ಒಣಗಿ ನಾಶವಾಗಿಲ್ಲ. ಆದ್ದರಿಂದ ನಿರಂತರ ನೀರು ಹರಿಸುವ ಪದ್ಧತಿ ಜಾರಿ ಮಾಡುವವರೆಗೂ ರೈತರ ಹೋರಾಟ ನಿಲ್ಲುವುದಿಲ್ಲ ಎಂದವರು ಹೇಳಿದ್ದಾರೆ.


# ವಹೀದಾ ರೆಹಮಾನ್‌ಗೆ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ

**(1ನೇ ಪುಟದಿಂದ)** ಸಚಿವ ಅನುರಾಗ್ ಠಾಕೂರ್ ಪ್ರಕಟಿಸಿದ್ದಾರೆ. 69ನೇ ಚಲನಚಿತ್ರ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಫಾಲ್ಕೆ ಪ್ರಶಸ್ತಿ ನೀಡಲಾಗುವುದು.

ಭರತ ನಾಟ್ಯ ಪರಿಣಿತೆಯೂ ಆಗಿರುವ ವಹಿದಾ ಅವರು, ಈ ಶತಮಾನ ಕಂಡ ಶ್ರೇಷ್ಠ ನಟಿಯರಲ್ಲಿ ಒಬ್ಬರಾಗಿದ್ದಾರೆ. ಗುರುದತ್ ಅವರ 'ಸಿಐಡಿ' ಚಿತ್ರದ ಮೂಲಕ ಅವರು ಹಿಂದಿ ಸಿನಿಮಾ ರಂಗಕ್ಕೆ ಕಾಲಿಟ್ಟಿದ್ದರು. 'ಕಾಗಜ್ ಕೆ ಫೂಲ್' ಹಾಗೂ 'ರಾಮ್ ಔರ್ ಶ್ಯಾಮ್' ಚಿತ್ರಗಳು ಅವರನ್ನು ಚಿತ್ರಪ್ರೇಮಿಗಳು ಗುರುತಿಸುವಂತೆ ಮಾಡಿದ್ದವು. ನಂತರ ಆರು ದಶಕಗಳಲ್ಲಿ ಅವರು 90ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. ಪ್ಯಾಸಾ, ಕಾಗಜ್ ಕೆ ಫೂಲ್, ಸಾಹಿಬ್ ಬೀಬಿ ಔರ್ ಗುಲಾಮ್, ಚೌಧವಿ ಕಾ ಚಾಂದ್, ಗೈಡ್, ಪ್ರೇಮ್ ಪೂಜಾರಿ, ಖಾಮೋಶಿ, ಕಭೀ ಕಭೀ, ರೇಷ್ಮಾ ಔರ್ ಷೇರಾ ಮುಂತಾದ ಚಿತ್ರಗಳು ಜನಪ್ರಿಯತೆ ತಂದು ಕೊಟ್ಟಿವೆ.

ಈ ಹಿಂದೆ ರೆಹಮಾನ್ ಅವರು ಪದ್ಮಶ್ರೀ ಹಾಗೂ ಪದ್ಮ ಭೂಷಣ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ.

# ದೇಹದಾರ್ಢ್ಯ ಸ್ಪರ್ಧೆಯಲ್ಲಿ ಜಿ.ಎಂ.ಐ.ಟಿ. ಪ್ರಥಮ ಸ್ಥಾನ



ದಾವಣಗೆರೆ, ಸೆ.26- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಕಳೆದ ವಾರ ಏರ್ಪಡಿಸಿದ್ದ ರಾಜ್ಯಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಬಯೋಟೆಕ್ನಾಲಜಿ ವಿಭಾಗದ ವಿದ್ಯಾರ್ಥಿ ದರ್ಶನ್ ಆರ್. ಅವರು 65 ಕೆ.ಜಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಕ್ರೀಡಾಪಟುವಿಗೆ ಕಾಲೇಜಿನ ನಿರ್ವಹಣಾ ಪ್ರತಿನಿಧಿ ವೈ.ಯು. ಸುಭಾಷ್ಚಂದ್ರ, ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ ಎಂ.ಬಿ, ಬಯೋಟೆಕ್ನಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಪ್ರಕಾಶ ಕೆ. ಕೆ. ಹಾಗೂ ಕ್ರೀಡಾ ಸಂಯೋಜಕ ಡಾ. ಕಿರಣ್‌ಕುಮಾರ್ ಎಚ್.ಎಸ್. ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಅಜ್ಜಯ್ಯ ಜಿ.ಬಿ. ಮತ್ತು ಹನುಮಂತಪ್ಪ ವೈ. ಇವರುಗಳು ಅಭಿನಂದಿಸಿದ್ದಾರೆ.

# ಸೇಂಟ್ ಜಾನ್ಸ್ ವಿದ್ಯಾ ಸಂಸ್ಥೆಯಲ್ಲಿ 'ಕ್ಯಾಲಿಗ್ರಫಿ' ಸ್ಪರ್ಧೆ : ಸೈಕಲ್ ವಿತರಣೆ



ದಾವಣಗೆರೆ, ಸೆ. 25- ನಗರದ ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಬರವಣಿಗೆ ಸುಧಾರಿಸಲು, ಸುಂದರ ಅಕ್ಷರಗಳ ಬರವಣಿಗೆಯನ್ನು ತರಬೇತಿಗೊಳಿಸಲು ಕ್ಯಾಲಿಗ್ರಫಿ ಬರವಣಿಗೆಯ ವಿಶೇಷ ತರಗತಿಗಳು ನಡೆಯುತ್ತಿದ್ದು, ಈಚೆಗೆ ಶಾಲಾ ಆವರಣದಲ್ಲಿ ಕ್ಯಾಲಿಗ್ರಫಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಕ್ಯಾಲಿಗ್ರಫಿ ಶಿಕ್ಷಕ ಬಿ.ಶಂಕರ್ ಅವರಿಂದ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ಸೈಕಲ್ ವಿತರಣೆ ಮಾಡಲಾಯಿತು. ಈ ರೀತಿ ಬರವಣಿಗೆಗಾಗಿ ಇಂತಹ ಉತ್ತಮ ಬಹುಮಾನವನ್ನು ವಿತರಣೆ ಮಾಡಿದ ಮೊದಲ ಶಿಕ್ಷಕರಿವರಾಗಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲ ಸಯ್ಯದ್ ಆರಿಫ್ ಆರ್. ಹಾಗೂ ಶ್ರೀಮತಿ ಪ್ರೀತಾ ಟಿ. ರೈರವರು, ಉಪಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ, ಶಿಕ್ಷಕ, ಶಿಕ್ಷಕೇತರ ವೃಂದದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಇಂಡಿಯನ್ ಮಾರ್ಷಲ್ ಆರ್ಟ್ಸ್ ಮಕ್ಕಳಿಗೆ ಕರಾಟೆಯಲ್ಲಿ ಬಹುಮಾನ




ದಾವಣಗೆರೆ, ಸೆ. 26 - ಶಿವಮೊಗ್ಗದ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ಪುನೀತ್ ರಾಜಕುಮಾರ್ ಸ್ಮರಣಾರ್ಥ ನಡೆದ ರಾಷ್ಟ್ರಮಟ್ಟದ 18ನೇ ನ್ಯಾಷನಲ್ ಲೆವೆಲ್ ಓಪನ್ ಕರಾಟೆ ಚಾಂಪಿಯನ್‌ಶಿಪ್-2023ರಲ್ಲಿ ದಾವಣಗೆರೆ ಇಂಡಿಯನ್ ಮಾರ್ಷಲ್ ಆರ್ಟ್ಸ್ ಅಂಡ್ ಸೆಲ್ಫ್ ಡಿಫೆನ್ಸ್ ಆರ್ಗನೈಸೇಷನ್ ಶಾಲೆಯ ಕರಾಟೆ ಪಟುಗಳು ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಗಣೇಶ, ಸೃಜನ್, ನಮ್ರತಾ, ಕ್ರಾಂತಿ, ಬಿ. ನವೀನ್, ಪ್ರಥಮ ಬಹುಮಾನ ಪಡೆದಿದ್ದು, ಶಾರದಾದೇವಿ, ರಾಕೇಶ್, ರಾಘವಿ, ಸಾನ್ವಿ, ಚಿನ್ಮಯ್, ಇಂಪನ, ಯಶಸ್, ದರ್ಶನ್, ರಾಹುಲ್, ಪ್ರಮೋದ್ ದ್ವಿತಿಯ ಹಾಗೂ ತೃತೀಯ ಸ್ಥಾನವನ್ನು ಅರಸು ಪ್ರದೀಪ್, ವರ್ಷನ್ ಪಡೆದಿದ್ದಾರೆ ಎಂದು ಶಾಲೆಯ ಅಧ್ಯಕ್ಷ ಸನ್‌ಶೈಯ್ ನಜೀರ್ ತಿಳಿಸಿದ್ದಾರೆ.

# ಗವಾಯಿಗಳವರ ಸ್ಮರಣೋತ್ಸವ



ದಾವಣಗೆರೆ, ಸೆ. 26- ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳವರ ಸ್ಮರಣೋತ್ಸವ ಕಾರ್ಯಕ್ರಮವನ್ನು ಪುಟ್ಟರಾಜ ಸೇವಾ ಸಮಿತಿ ಜಿಲ್ಲಾ ಮಹಿಳಾ ಘಟಕ ದಾವಣಗೆರೆ ಮತ್ತು ಜಿಲ್ಲಾ ಘಟಕದ ವತಿಯಿಂದ ಆಚರಿಸಲಾಯಿತು. ಶ್ರೀಮತಿ ಮಂಗಳಗೌರಿ ರೇವಣಸಿದ್ದಪ್ಪ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ಸತೀಶ್, ಸಹ ಕಾರ್ಯದರ್ಶಿ ಮಧುಮತಿ ಗಿರೀಶ್, ಕೋಶಾಧ್ಯಕ್ಷರಾದ ಶಾನ್ವಿ ರಾಜಶ್ರೀ ರಮೇಶ್, ಸಂಚಾಲಕರಾದ ಶಾಂತಾ ಶಿವಶಂಕರ್, ಶಶಿಕಲಾ, ಸದಸ್ಯರಾದ ಪೂರ್ಣಿಮಾ ಎಲ್. ಬಸವರಾಜ್, ಸುಮಾ, ಸೀಮಾ ಇದ್ದರು.

# ವಿಶ್ವಸಂಸ್ಥೆಯಲ್ಲೂ 'ಭಾರತ' ಪದದ ಬಳಕೆ

**(1ನೇ ಪುಟದಿಂದ)** ಭಾರತ ಎಂಬ ಪದ ಬಳಸಿದ್ದಾರೆ. 'ನಮಸ್ತೇ ಫ್ರಮ್ ಭಾರತ್' ಎಂದವರು ಹೇಳಿದ್ದಾರೆ. ಕೇಂದ್ರ ಸರ್ಕಾರ ಇತ್ತೀಚಿನ ದಿನಗಳಲ್ಲಿ ಭಾರತ ಎಂಬ ಪದದ ಬಳಕೆಯನ್ನು ಹೆಚ್ಚಿಸುತ್ತಿದೆ. ಜಿ20 ಶೃಂಗಸಭೆಯಲ್ಲೂ ಸಹ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 'ಭಾರತ'ದ ಪ್ರತಿನಿಧಿ ಎಂದೇ ಗುರುತಿಸಿಕೊಂಡಿದ್ದರು. ಜಿ20 ಶೃಂಗಸಭೆಯ ಹಲವಾರು ಅಧಿಕೃತ ದಾಖಲೆಗಳಲ್ಲೂ ಸಹ ಬಾರತ ಎಂದೇ ತಿಳಿಸಲಾಗಿತ್ತು.


**ಸೈಟ್ ಖರೀದಿಗೆ ಬೇಕಾಗಿದೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
ಕಿರಣ್ ಭೂಸನೂರ್
98440-63409
(ದಾವಣಗೆರೆಯಲ್ಲಿ ಎಲ್ಲಾದರೂ)

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು O T ಸ್ಟಾಫ್ ಬೇಕಾಗಿದ್ದಾರೆ ಮತ್ತು ಆಯಾಗಳು ಬೇಕಾಗಿದ್ದಾರೆ
93808 12373
70194 01728
80887 18849

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾಜು ಪ್ರಿಂಟರ್ಸ್
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಆಯಾ ಬೇಕಾಗಿದ್ದಾರೆ. ಸಂಪರ್ಕಿಸಿ ವಿದ್ಯಾನಗರ ದಾವಣಗೆರೆ.
98800 30171

**ಬೇಕಾಗಿದ್ದಾರೆ**
ಬ್ಯಾಂಕಿಂಗ್ ಸೆಕ್ಟರ್ ಅಲ್ಲಿ ಕೆಲಸ ಮಾಡಲು ಟೆಲಿ ಕಾಲರ್ಸ್ ಬೇಕಾಗಿದ್ದಾರೆ. ಉತ್ತಮ ವೇತನ ಮತ್ತು ಇನ್‌ಸೆಂಟಿವ್ಸ್ ಕೊಡಲಾಗುತ್ತದೆ.
90366 36102

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಬೇಕಾಗಿದ್ದಾರೆ**
ಟ್ಯಾಲಿ ಆಪರೇಟರ್, ಆಫೀಸ್ ಬಾಯ್, ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್, ನೇತ್ರ ತಜ್ಞರು
98861 70950

**ಬೇಕಾಗಿದ್ದಾರೆ**
ಮನೆ ಕೆಲಸ ಹಾಗೂ ಸಸ್ಯಹಾರಿ ಅಡುಗೆ ಮಾಡಲು ಆಯಾ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. 3ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
98451 40948, 98804 36414

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ತಕ್ಷಣ ಬೇಕಾಗಿದ್ದಾರೆ**
ನುರಿತ ಹಾಗೂ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ ಟ್ಯಾಲಿ ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ.
88844 46096

**ಮಳಿಗೆ ಬಾಡಿಗೆಗೆ ಇದೆ**
ಪಶ್ಚಿಮ-ದಕ್ಷಿಣ ಕಾರ್ನರ್ ಮಳಿಗೆ H.K.R. ಸರ್ಕಲ್ ಹತ್ತಿರ ನಿಟ್ಟುವಳ್ಳಿ ಹೊಸ ಬಡಾವಣೆ
98447 45856, 98867 93942

**ಗೃಹ ಮಂಡಳಿಯ ಮೂಲ ಹಂಚಿಕೆ ತಿಳುವಳಿಕೆ ಪತ್ರ ಕಳೆದಿದೆ**
ದಾವಣಗೆರೆ ಕರ್ನಾಟಕ ಗೃಹ ಮಂಡಳಿಯ ಬಡಾವಣೆಯ ಸೈಟ್ ನಂ: 1280 ವರ್ಗ MIG ಅಳತೆ 15x9 ಮೀ ಇರುವ ಮೂಲ ಹಂಚಿಕೆ ತಿಳುವಳಿಕೆ ಪತ್ರ ನಿರ್ಮಲ ಟಿ. ಹೆಸರಿನಲ್ಲಿದ್ದು, ಮನೆ ಬದಲಾವಣೆ ಮಾಡುವಾಗ ಆಕಸ್ಮಿಕವಾಗಿ ಕಳೆದು ಹೋಗಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರ್‌ಗೆ ತಿಳಿಸಬೇಕಾಗಿ ವಿನಂತಿ.
ಬಸವರಾಜ್ ಜಿ.ಎಂ. 91418 18103

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ವಾಹನಗಳಿಗೆ ಪೆಟ್ರೋಲ್ ಹಾಕಲು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ :
70266-43088

**ಪಾರ್ಟನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**ಬೇಕಾಗಿದ್ದಾರೆ**
ಅಡುಗೆ ಕೆಲಸಕ್ಕೆ ಮತ್ತು ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
84319 22125

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಜಮೀನು ಮಾರಾಟಕ್ಕಿದೆ**
ಶಾಮನೂರಿನಿಂದ ಮಲೇಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ಬೂದಿಹಾಳ್ ಹತ್ತಿರ, 3 ಎಕರೆ 23 ಗುಂಟೆ ಬೋರ್‌ವೆಲ್ ಇರುವ ನೀರಾವರಿ ಜಮೀನು ಮಾರಾಟಕ್ಕಿದೆ.
99454 61501
76196 37007

**ROOM TO-LET / FOR RENT**
Room vacant near swimming pool, MCC `B' block.Ground floor with attached bathroom.
99721 02927

**JOB OPPORTUNITY**
Female Office Assistant
For Reputed Educational Institution. Good In Office Work-Computer Skills Good In Customer Dealing. Freshers can also apply (B.com., & M.Com.,)
for contact : 97312 18567
Send C.V-hardsoftdvg@gmail.com

**WANTED**
Tally operator
Office boy
Sales boys and sales girls
Optometrist
98861 70950

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
TALLY ಬಲ್ಲವರಿಗೆ ಆದ್ಯತೆ.
ರಾಮದೂತ ಎಂಟರ್‌ಪ್ರೈಸಸ್
97388 27452
74110 25934

**2 BHK HOUSE FOR RENT / LEASE**
Near Podar International In J.h. Patel Badavane, Davanagere.
95359 99218, 88617 11072

**ರಕ್ತ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಅಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED**
- Technicians (ITI)
- Sales Executives
- Service Floor Incharge (Diploma)
Nayana Motors
Vespa & Aprilia Showroom
63666 32123
97312 90327
Hadadi Road, Davanagere.

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
98451 04109

**ಎಕ್ಸ್‌ಚೇಂಜ್ ಆಫರ್**
ನಮ್ಮಲ್ಲಿ ಎಲ್ಲಾ ತರಹದ ಸೋಫಾ ಕುಷನ್ ಮತ್ತು ಸ್ಪಂಜ್ ಬೆಡ್ ಸಿಗುತ್ತದೆ ಹಾಗೂ ಸೋಫಾ, ಬೆಡ್, ಕುಷನ್ ಎಕ್ಸ್‌ಚೇಂಜ್ ಆಫರ್ ಇದೆ. ಪಾಲಿಶ್ ಸಹ ಮಾಡುತ್ತೇವೆ.
79751 07268

**WANTED**
We are Hiring telecallers Good Communication Skill.
Required : (Only for Girls, Womens)
Salary : 6000, 7000 (Under Graduates)
Salary : 8000, 9000, 10000 (Post Graduates)
Contact : 95350 51589, 78670 75786
Office Location : Hasabhavi Cicrle, K.R.Market, Davanagere

**ಬೇಕಾಗಿದ್ದಾರೆ**
PUC/DEGREE
ಆದ ಮಹಿಳೆಯರು ರ್‍ಯಾಕ್ ನಿಂದ ಸ್ನಾಕ್ ತೆಗೆಯಲು ಮಹಿಳೆಯರು ಹಾಗೂ ಡೆಲಿವರಿ ಬಾಯ್ಸ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಜಮೀನು ಮಾರಾಟಕ್ಕೆ ಇವೆ**
ಅಡಿಕೆ ತೋಟ 11 1/2 ಎಕರೆ ಕುಕ್ಕುವಾಡ ಹತ್ತಿರ, ಲೋಕಿಕೆರೆ ಹತ್ತಿರ 3 ಎಕರೆ, ಅಡಿಕೆ ತೋಟ ಇದೆ, ಮಲ್ಲಶೆಟ್ಟಿಹಳ್ಳಿ ಹತ್ತಿರ 2 ಎಕರೆ ಇದೆ.
ಏಜೆಂಟರು S ಯಲ್ಲೋಜಿರಾವ್
97418 11694

**WANTED FEMALE RECEPTIONIST**
Age : 20 to 27years,Quli : PUC/Any degree
Kannada, English, Hindi
12k to 15k Per Month
HAIRPOINT UNISEX SALON
MCC B block, near water tank park, Davangere
97386 64400, 91483 19342

**ಕಂಪ್ಯೂಟರ್ ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ**
ದಾವಣಗೆರೆಯ ನಾನ್‌ವೆಜ್ ಹೋಟೆಲ್‌ನಲ್ಲಿ ಕಾರ್ಯ ನಿರ್ವಹಿಸಲು.
9945597132

**Experienced Salesman Required**
for branded textile showroom.
98867 57688

**ಬೇಕಾಗಿದ್ದಾರೆ**
ಆಲ್ ರೌಂಡ್ ಕುಕ್, ವೆಯ್ಟರ್‌ಗಳು ದಾವಣಗೆರೆಯ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು.
ಸಂಪರ್ಕಿಸಿ :
80889 56656

**FOR RENT**
A semi-furnished 2 BHK home with 1800 sq.ft. of space on the Ground Floor.
Note : No brokers please.
Address: 2670/42, 3rd Main, S.S. Layout B Block, Davangere - 577004
Contact : 93411 03332

**Security guard ಬೇಕಾಗಿದ್ದಾರೆ**
ಹದಡಿ ರೋಡ್ ನಿಟುವಳ್ಳಿ & ಬನಶಂಕರಿ ಲೇಔಟ್
97409 77785

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಪ್ರತಿಯೊಬ್ಬರ ವೈಯಕ್ತಿಕ ಭಿನ್ನತೆಗಳನ್ನು ಅರ್ಥ ಮಾಡಿಕೊಂಡಾಗ ಯಶಸ್ಸು ಸಾಧ್ಯ



**ಭದ್ರಾ ಪದವಿ ಕಾಲೇಜಿನ ಸಮಾರಂಭದಲ್ಲಿ ಡಾ. ಕೆ.ಎಸ್.ಶ್ರೀಧರ್**

ದಾವಣಗೆರೆ, ಸೆ. 26- ಇಂದಿನ ತಂತ್ರಜ್ಞಾನದ ಆವಿಷ್ಕಾರ ಯುಗದಲ್ಲಿ ಆಧುನಿಕ ಬದುಕಿನ ಶೈಲಿಯೇ ಬದಲಾಗಿದೆ. ಅದರಲ್ಲೂ ಚಾಟ್ ಜಿ.ಪಿ.ಟಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸಿಯಂತಹ ನೂತನ ತಂತ್ರಜ್ಞಾನದಿಂದಾಗಿ ಇಂದು ಸಾಕಷ್ಟು ಜನರು ನಿರುದ್ಯೋಗಿಗಳಾಗಿದ್ದಾರೆ. ಮಾನವನ ವ್ಯಕ್ತಿತ್ವಗಳು ಕಳಚಿ ಬೀಳುತ್ತಿವೆ. ಇಂತಹ ಸಂದರ್ಭದಲ್ಲಿ ಪಡೆದ ಜ್ಞಾನ ಹೊಸ ಆವಿಷ್ಕಾರ ಹಾಗೂ ಅನ್ವೇಷಣೆಗಳತ್ತ ಸಾಗಬೇಕಾಗಿದೆ. ಹಾಗೆಯೇ ಸಾಧಕರಾಗಲು ಪ್ರತಿಯೊಬ್ಬರ ವೈಯಕ್ತಿಕ ಭಿನ್ನತೆಗಳನ್ನು ಅರ್ಥ ಮಾಡಿಕೊಂಡಾಗ ಯಶಸ್ಸು ಗಳಿಸಲು ಸಾಧ್ಯ ಎಂದು ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಛೇರ್ಮನ್ ಪ್ರೊ. ಡಾ. ಕೆ.ಎಸ್. ಶ್ರೀಧರ್ ಅಭಿಪ್ರಾಯಪಟ್ಟರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಭದ್ರಾ ಪದವಿ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಹಾಗೂ ಭದ್ರಾ ಸ್ನಾತಕೋತ್ತರ ಕೇಂದ್ರದ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಬದುಕಿನ ಏರು-ಪೇರುಗಳನ್ನು ಎದುರಿಸಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಜಗತ್ತಿನ ಅತಿದೊಡ್ಡ ಸಂಪತ್ತು ಎಂದರೆ ಬುದ್ಧಿವಂತಿಕೆ ಹಾಗೂ ಅತಿ ದೊಡ್ಡ ಆಯುಧ ಎಂದರೆ ತಾಳ್ಮೆ, ಜ್ಞಾನವೆಂಬುದೇ ಶಕ್ತಿ ಎಂದರು. ಇವತ್ತಿನ ಕಂಪ್ಯೂಟರ್ ಹಾಗೂ ತಂತ್ರಜ್ಞಾನ ಸಮಾಜಕ್ಕೆ ಬೇಕಾಗುವ ಅಂಶಗಳನ್ನು ಒದಗಿಸುತ್ತಿದೆ. ಈ ಹಿನ್ನೆಲೆಯಲ್ಲಿ ಯುವಕರು ದೇಶಕ್ಕೆ ಏನಾದರೂ ಸೇವೆಯನ್ನು ಸಲ್ಲಿಸಬೇಕೆಂದು ಶ್ರೀಧರ್ ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪ್ರೊ.ಸಿ. ಹೆಚ್. ಮುರುಗೇಂದ್ರಪ್ಪ ಮಾತನಾಡಿ, ಪ್ರತಿಯೊಬ್ಬ ನಾಗರಿಕನು ತನ್ನ ಜವಾಬ್ದಾರಿಯನ್ನು ಅರಿತು ಬದುಕಬೇಕು ಹಾಗೂ ಸಾಮಾಜಿಕ ಕಾಳಜಿ, ಸಾಮಾಜಿಕ ಬದ್ಧತೆ ಇರಬೇಕೆಂದರು. ವಿದ್ಯಾರ್ಥಿಗಳಲ್ಲಿ ಸೃಜನಶೀಲ ಮನೋ ಭಾವನೆ ಅತ್ಯವಶ್ಯಕವೆಂದು ಹೇಳುವುದರ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಉತ್ತಮ ಸಂದೇಶ ಸಮಾಜಕ್ಕೆ ಹೋಗಬೇಕು ಎಂದು ಕರೆ ನೀಡಿದರು.

ಭದ್ರಾ ಪದವಿ ಕಾಲೇಜು ಹಾಗೂ ಭದ್ರಾ ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲ ಪ್ರೊ. ಟಿ. ಮುರುಗೇಶ್ ಮಾತನಾಡಿ, ಗುರು ಇಲ್ಲದೆ ಗುರಿ ಸಾಧಿಸಲು ಸಾಧ್ಯವಿಲ್ಲ, ನಡೆ-ನುಡಿ ಸಂಸ್ಕೃತಿ ಪರಂಪರೆಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದ್ದರೂ ಪ್ರಸ್ತುತ ದಿನಗಳಲ್ಲಿ ಗುರುವಿಗೆ ಸಿಕ್ಕ ಗೌರವ, ಘನತೆಗಳು ಕ್ಷೀಣಿಸುತ್ತಿರುವುದು ಆಘಾತ ಕಾರಿ ಸಂಗತಿ ಎಂದು ಖೇದ ವ್ಯಕ್ತಪಡಿಸಿದರು.

ಭದ್ರಾ ಎಜುಕೇಷನ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಸಂಕೇತ್ ಉಪಸ್ಥಿತರಿದ್ದರು. ಉಪನ್ಯಾಸಕ ಆರ್.ಕೆ. ಬಸವನಗೌಡ ಅವರು ವಿದ್ಯಾರ್ಥಿಗಳಿಗೆ ಸಂವಿಧಾನ ಪೀಠಿಕೆ ಓದಿಸಿದರು.

ಭಾಗ್ಯ ಸ್ವಾಗತಿಸಿದರು. ಕೆ.ಆರ್. ಕವನ ನಿರೂಪಿಸಿದರು. ನಮಿತಾ ವಂದಿಸಿದರು.

# ಕಾಟಾಚಾರದ ಜನತಾ ದರ್ಶನ ಆಗದಿರಲಿ



**ಶಾಸಕ ಕೆ.ಎಸ್.ಬಸವಂತಪ್ಪ ಅಧಿಕಾರಿಗಳಿಗೆ ಕಿವಿಮಾತು**

ದಾವಣಗೆರೆ, ಸೆ. 26 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಲು ಜನತಾ ದರ್ಶನ ಕಾರ್ಯಕ್ರಮ ಮಾಡಿದ್ದು, ಇದನ್ನು ಕಾಟಾಚಾರಕ್ಕೆ ಮಾಡದೆ ಜನರಿಗೆ ಸ್ಪಂದಿಸಬೇಕು ಎಂದು ಶಾಸಕ ಕೆ.ಎಸ್. ಬಸವಂತಪ್ಪ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮಾಯಕೊಂಡದಲ್ಲಿ ಸೋಮವಾರ ತಾಲ್ಲೂಕು ಆಡಳಿತ ಮತ್ತು ವಿವಿಧ ಇಲಾಖೆಗಳ ಆಶ್ರಯದಲ್ಲಿ ಆಯೋಜಿಸಿದ್ದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇಂದು ಸ್ವೀಕರಿಸಿದ ಅರ್ಜಿಗಳನ್ನು ಮುಂದಿನ ಜನತಾ ದರ್ಶನ ಕಾರ್ಯಕ್ರಮ ಬರುವುದರೊಳಗೆ ಅಧಿಕಾರಿಗಳು ಬಗೆಹರಿಸಿ, ಅವರಿಗೆ ಪರಿಹಾರ ಒದಗಿಸಿದರೆ, ಈ ಕಾರ್ಯಕ್ರಮ ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ. ಅಷ್ಟೇ ಅಲ್ಲದೇ ನೀವು ಪರಿಹಾರ ನೀಡಿದ ವರದಿಯನ್ನು ಅಂದು ನೀಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರದ ಬಳಿ ಬರುವ ಬದಲು ಸರ್ಕಾರವೇ ಜನರ ಬಳಿಗೆ ಬರುವ ವಿನೂತನ ಜನತಾ ದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

ನಮ್ಮ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಜನರ ಸಮಸ್ಯೆಗಳ ಪರಿಹಾರಕ್ಕೆ ಸರ್ವ ಪ್ರಯತ್ನ ನಡೆಸುತ್ತಿದ್ದು, ಆಡಳಿತವನ್ನೇ ನಿಮ್ಮಮನೆ ಬಾಗಿಲಿಗೆ ಕರೆದುಕೊಂಡು ಬಂದು ನಿಮ್ಮ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನ ನಡೆಸುತ್ತಿದ್ದೇವೆ. ಇದು ನಮ್ಮ ಸರ್ಕಾರದ ಬದ್ದತೆಯಾಗಿದೆ. ನಾವು ನುಡಿದಂತೆ ನಡೆಯುತ್ತಿದ್ದೇವೆ ಎಂದರು.

ಚುನಾವಣೆ ಪೂರ್ವದಲ್ಲಿ ನೀಡಿದ ಭರವಸೆಯಂತೆ ಐದು ಗ್ಯಾರಂಟಿಗಳ ಪೈಕಿ ಈಗಾಗಲೇ ನಾಲ್ಕು ಗ್ಯಾರಂಟಿಗಳನ್ನು ಈಡೇರಿಸಲಾಗಿದೆ. ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಅನ್ನಭಾಗ್ಯ ಹಾಗೂ ಶಕ್ತಿಯೋಜನೆಗಳ ಅಡಿಯಲ್ಲಿ ಈ ರಾಜ್ಯದ, ಬಡವರ ಮಧ್ಯಮ ವರ್ಗದ ಜನರಿಗೆ ಯೋಜನೆಗಳ ಲಾಭ ತಲುಪಿಸಲಾಗಿದೆ. ಇದೀಗ ಜನತಾ ದರ್ಶನ ಕಾರ್ಯಕ್ರಮ ಮೂಲಕ ಅಧಿಕಾರಿಗಳನ್ನು ಜನರ ಮನೆ ಬಾಗಿಲಿಗೆ ಕರೆದುಕೊಂಡು ಬಂದು ನಿಮ್ಮ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಮ್ಮ , ಮಾಜಿ ಜಿಪಂ ಸದಸ್ಯ ವೆಂಕಟೇಶ್, ಉಪತಹಸೀಲ್ದಾರ್ ಹಾಲೇಶಪ್ಪ, ಎಡಿಎಲ್ ಆರ್ ಕಸ್ತೂರಿ, ಸಹಾಯಕ ಸಿಡಿಪಿಒ ನೇತ್ರಾವತಿ, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸುನಿತಾ, ಪಿಡಿಒ ನಾಗರಾಜ್, ಆರ್.ಎಫ್.ಒ ದರ್ಶನ್, ಎಇಇ ಪುಟ್ಟಸ್ವಾಮಿ, ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಹನುಮಂತಪ್ಪ, ಗೋಪಾಲ, ರುದ್ರೇಶ್ ಸೇರಿದಂತೆ, ತಾಲ್ಲೂಕು ಮಟ್ಟದ ಅಧಿಕಾರಿಗಳು, ವಿವಿಧ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಫಲಾನುಭವಿಗಳು ಹಾಜರಿದ್ದರು.

ಸ್ಥಳದಲ್ಲಿಯೇ ಶಾಸಕ ಕೆ.ಎಸ್.ಬಸವಂತಪ್ಪ, ಸಮಸ್ಯೆ ಕೋರಿ ಜನರು 60 ಅರ್ಜಿ ಸಲ್ಲಿಸಿದರು. ಅದರಲ್ಲಿ 30 ಅರ್ಜಿಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಿದರು.

# ಜಿ.ಪಂ. ನಲ್ಲೊಂದು ಪುಟ್ಟ ವಾಚನಾಲಯ



ಮಾನ್ಯರೇ,

ಕಳೆದೆರಡು ದಿನದ ಹಿಂದೆ ಕೆಲಸದ ಮೇಲೆ ದಾವಣಗೆರೆ ಜಿಲ್ಲಾ ಪಂಚಾಯ್ತಿ ಕಾರ್ಯಾಲಯಕ್ಕೆ ಬೇಟಿ ನೀಡಿದ್ದೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಗೆ ಹೊಂದಿಕೊಂಡಂತಿರುವ ಕಾರಿಡಾರ್‌ನಲ್ಲಿ, ಪುಟ್ಟದೊಂದು ಗ್ರಂಥ ಭಂಡಾರ ಹಾಗೂ ಕುಳಿತು ಓದಲು ನಾಲ್ಕು ಖುರ್ಚಿಗಳನ್ನು ಇಡಲಾಗಿತ್ತು. ಕುತೂಹಲದಿಂದ ಗಮನಿಸಿ, ಅಟೆಂಡರ್ ಕೇಳಿದೆ ಇದು ನಮಗ ಎಂದು ಹೂ.. ಸಾರ್.. ಸಾಹೇಬರು, ಸಂದರ್ಶಕರಿಗೆ ಅನುಕೂಲವಾಗಲೆಂದು ಮಾಡಿಸಿದ್ದಾರೆ. ತಕ್ಕೊಂಡು ಓದಿ ಸಾ ಎಂದರು. ಖುಷಿ ಅನಿಸಿತು.

ಹಿಂದೆ ಅನೇಕ ಬಾರಿ ಬಂದಾಗ ಗಂಟೆಗಟ್ಟಲೇ ಕಾಯ್ದು ಸಿ.ಎಸ್. ಸಾಹೇಬರನ್ನು ಭೇಟಿಯಾಗಿದ್ದೆ. ಇಂದು ನನಗೆ ಕಾಯ್ದ ಅನುಭವವಾಗಲಿಲ್ಲ, ಕಾರಣ ಎದುರು ಪುಸ್ತಕ ಭಂಡಾರವಿತ್ತು. ಚಿಕ್ಕದೊಂದು ಪುಸ್ತಕ ತೆಗೆದು ಕಣ್ಣಾಡಿಸಿದೆ. ಅಷ್ಟರಲ್ಲಿ, ನನಗೆ ಸಂದರ್ಶನಕ್ಕೆ ಕರೆ ಬಂತು. ಒಳಹೋಗಿ ಸಿ.ಎಸ್. ಅವರಿಗೆ ಓದುಗರಿಗೆ ಗ್ರಂಥ ಭಂಡಾರ ಏರ್ಪಡಿಸಿರುವುದಕ್ಕೆ ಧನ್ಯವಾದ ಹೇಳಿ ಅಭಿನಂದಿಸಿದೆ.

ಸಂದರ್ಶಕರ ಸಂಖ್ಯೆ ಜಾಸ್ತಿ ಇದ್ದಾಗ ಸಾರ್ವಜನಿಕರು ಕಛೇರಿ ಕೆಲಸದ ಮೇಲೆ ಬಂದಾಗ ಹಾಳು ಹರಟೆ ಮಾತು ಬಿಟ್ಟು ಪುಸ್ತಕದ ಉಪಯೋಗ ಪಡೆಯಲೆಂದು ಅನೇಕ ಉಪಯುಕ್ತ ಮಾಹಿತಿ ಒದಗಿಸುವ, ಚಿಕ್ಕ ಹಾಗೂ ದೊಡ್ಡ ಪುಸ್ತಕಗಳನ್ನು ಇಟ್ಟು ಅನುಕೂಲ ಮಾಡಿರುವುದನ್ನು ಸಾರ್ವಜನಿಕ ಓದುಗರು ಸಿ.ಇ.ಓ. ರವರ ಕಾರ್ಯವನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.


-ಎಂ. ಧರ್ಮಪ್ಪ

# ಎಲೆಬೇತೂರಿನಲ್ಲಿ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಸ್ಮರಣೆ



ಎಲೆಬೇತೂರು, ಸೆ. 26 - ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಹಾಗೂ ಶ್ರೀ ತರಳಬಾಳು ಜಗದ್ಗುರು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ನಡೆಸಲಾಯಿತು.

## ರಟ್ಟಿಹಳ್ಳಿ : ಶ್ರೀ ಹೊಳೆಸಾಲು ದುರ್ಗಾದೇವಿ, ಶ್ರೀ ಮಾರಿಕಾಂಬ ದೇವಿಗೆ ವಿಶೇಷ ಅಲಂಕಾರ



ದಾವಣಗೆರೆ, ಸೆ.25- ರಟ್ಟಿ ಹಳ್ಳಿಯ ಶ್ರೀ ಹೊಳೆಸಾಲು ದುರ್ಗಾ ದೇವಿ, ಶ್ರೀ ಮಾರಿಕಾಂಬದೇವಿ ಅಮ್ಮ ನವರಿಗೆ ಶ್ರಾವಣ ಮಾಸದ ಮಂಗಳ ವಾರ ದಾವಣಗೆರೆಯ ಶ್ರೀಮತಿ ಆಶಾ ಎನ್. ವಿನೋದ್‌ಕುಮಾರ್ ಸಾಲಂಕಿ ಮತ್ತು ಕುಟುಂಬದವರು ಪುಷ್ಪಾಲಂಕಾ ರದ ಸೇವೆ ನೆರವೇರಿಸಿದರು.

# ಉಚಿತ ಲ್ಯಾಪ್‌ಟಾಪ್ ಪಡೆಯಲು ಅರ್ಜಿ

ದಾವಣಗೆರೆ, ಸೆ.26- ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಕಾರ್ಮಿಕರ ಮಕ್ಕಳು ಪ್ರಸಕ್ತ ಸಾಲಿನಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ದಾವಣಗೆರೆ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಇವರ ವ್ಯಾಪ್ತಿಯಲ್ಲಿ ನೋಂದಣಿಯಾಗಿರುವ ಕಾರ್ಮಿಕರು ಈ ಸೌಲಭ್ಯವನ್ನು ಪಡೆಯಬಹುದು. ಅರ್ಜಿ ನಮೂನೆಯನ್ನು ಸಂಬಂಧಿಸಿದ ಕಾರ್ಮಿಕ ನಿರೀಕ್ಷಕರ ಕಛೇರಿಯಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಕಾರ್ಮಿಕ ನಿರೀಕ್ಷಕರಿಗೆ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅಕ್ಟೋಬರ್ 11 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಅಧಿಕಾರಿಯವರ ಕಚೇರಿ ದೂ ಸಂ: 08192-237332 ಸಂಪರ್ಕಿಸಲು ಕಾರ್ಮಿಕ ಅಧಿಕಾರಿ ಇಬ್ರಾಹಿಂ ತಿಳಿಸಿದ್ದಾರೆ.

# 1ರಂದು ಶ್ರೀ ಜಗದ್ಗುರು ಜಯವಿಭವ ವಿದ್ಯಾ ಸಂಸ್ಥೆಯ ಹಳೇ ವಿದ್ಯಾರ್ಥಿಗಳ ಸಭೆ

ದಾವಣಗೆರೆ ಸೆ. 26 - ನಗರದ ಎನ್.ಆರ್. ರಸ್ತೆಯಲ್ಲಿರುವ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ 60 ವರ್ಷಗಳನ್ನು ಪೂರೈಸಿದ್ದು, ಸಂಸ್ಥೆಯ 60ನೇ ವರ್ಷದ ಸಂಭ್ರಮಾಚರಣೆಯನ್ನು ಆಚರಿಸುವ ಹಿನ್ನೆಲೆಯಲ್ಲಿ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ಗುರುಬಸಮ್ಮ ವಿ.ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮತ್ತು ಗುರುಬಸಮ್ಮ ವಿ.ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ (ಕನ್ನಡ ಮತ್ತು ಆಂಗ್ಲ ಮಾಧ್ಯಮ), ಶಿವಣ್ಣ ಚಿಗಟೇರಿ ನರ್ಸರಿ ಶಾಲೆಗಳ ಹಳೆಯ ವಿದ್ಯಾರ್ಥಿಗಳ ಸಭೆಯನ್ನು ಅಕ್ಟೋಬರ್ 1 ರ ಭಾನುವಾರ ಬೆಳಿಗ್ಗೆ 10.30ಕ್ಕೆ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಆವರಣದಲ್ಲಿ ಮತ್ತು ಅದೇ ದಿನ ಮಧ್ಯಾಹ್ನ 3.30ಕ್ಕೆ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ, ವೀರಭದ್ರಪ್ಪ ಎಂ.ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿಗಳ ಸಭೆಯನ್ನು ವಿನೋಬನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಶಾಲೆಗಳ ಹಳೆಯ ವಿದ್ಯಾರ್ಥಿಗಳು ಸಭೆಯಲ್ಲಿ ಪಾಲ್ಗೊಂಡು 60ನೇ ವರ್ಷದ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಸಲಹೆ, ಸೂಚನೆ ನೀಡುವುದರ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಸಹಕಾರ ನೀಡ ಬೇಕೆಂದು ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಆಡಳಿತ ಮಂಡಳಿಯವರು ಕೋರಿದ್ದಾರೆ. ವಿವರಕ್ಕೆ ಸಂಪರ್ಕಿಸಿ : ಹೆಚ್.ನಿಂಗಪ್ಪ (ಜಿವಿಸಿಹೆಚ್‌ಎಸ್) - 99866 16956, ಹಾಲಪ್ಪ (ಎಸ್‌ಜೆಜೆಎಂಹೆಚ್‌ಎಸ್) 9663620439, ಶ್ರೀಮತಿ ಶಿವಲೀಲಾ (ಎಜಿಹೆಚ್‌ಎಸ್) 9844493028, ಶ್ರೀಮತಿ ವೀರಮ್ಮ (ಜಿವಿಸಿ ಹೆಚ್‌ಪಿಎಸ್) 89711183791, ಶ್ರೀಮತಿ ಶೈಲಜಾ (ವಿಎಂಸಿಹೆಚ್ ಪಿಎಸ್) 9901312828, ಸುರೇಶ್ ನಾಯಕ್ (ಎಜಿಹೆಚ್‌ಎಸ್) 7975192370.

# ನಗರದಲ್ಲಿ ಇಂದು ವರ್ಣ ಗಣೇಶ ಪ್ರದರ್ಶನ ಸಮಾರೋಪ

ದಾವಣಗೆರೆ ಚಿತ್ರಕಲಾ ಪರಿಷತ್ ಮತ್ತು ಹಿಂದೂ ಯುವ ಶಕ್ತಿ ವತಿಯಿಂದ ತೊಗಟವೀರ ಸಮುದಾಯ ಭವನದಲ್ಲಿ ಪ್ರತಿಷ್ಠಾಪಿಸಿರುವ 'ವರ್ಣ ಗಣೇಶ' ಪ್ರದರ್ಶನವು ಇಂದು ಸಮಾರೋಪಗೊಳ್ಳಲಿದೆ. ಕಲಾವಿದರಿಗೆ ಗೌರವ ಕಾರ್ಯಕ್ರಮವನ್ನು ಮಧ್ಯಾಹ್ನ 12.30 ಕ್ಕೆ ಹಮ್ಮಿಕೊಂಡಿದೆ. ಅಧ್ಯಕ್ಷತೆ : ಸದಾನಂದ ಹೆಗಡೆ, ಅತಿಥಿಗಳು : ಶಾಮನೂರು ಮಲ್ಲಿಕಾರ್ಜುನ್, ಪ್ರಭಾ ಮಲ್ಲಿಕಾರ್ಜುನ್, ದಿನೇಶ್ ಕೆ.ಶೆಟ್ಟಿ, ದೇವರಮನೆ ಶಿವಕುಮಾರ್, ಮಹಾಬಲೇಶ್ವರ ಪಿ.ಸಿ.

# ಹುಬ್ಬಳ್ಳಿ - ರಾಮೇಶ್ವರಂ ವಿಶೇಷ ರೈಲುಗಳ ಸೇವೆ ವಿಸ್ತರಣೆ



ರೈಲುಗಳ ಸಂಖ್ಯೆ 07355/07356 ಎಸ್.ಎಸ್.ಎಸ್ ಹುಬ್ಬಳ್ಳಿ-ರಾಮೇಶ್ವರಂ-ಎಸ್.ಎಸ್.ಎಸ್ ಹುಬ್ಬಳ್ಳಿ ಸಾಪ್ತಾಹಿಕ ಎಕ್ಸ್‌ಪ್ರೆಸ್ ವಿಶೇಷ ರೈಲುಗಳ ಸೇವೆಯನ್ನು ಈಗಿರುವ ಸಮಯ, ನಿಲುಗಡೆ ಮತ್ತು ಬೋಗಿಗಳ ಸಂಯೋಜನೆಯೊಂದಿಗೆ ವಿಸ್ತರಿಸಲಾಗುತ್ತಿದೆ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವನಿಜಕ ಸಂಪರ್ಕಾಧಿಕಾರಿ ಅನೀಶ್ ಹೆಗಡೆ ತಿಳಿಸಿದ್ದಾರೆ.

ಹುಬ್ಬಳ್ಳಿಯಿಂದ ಪ್ರತಿ ಶನಿವಾರ ಚಲಿಸುತ್ತಿರುವ ರೈಲು ಸಂಖ್ಯೆ 07355 ಎಸ್.ಎಸ್.ಎಸ್ ಹುಬ್ಬಳ್ಳಿ-ರಾಮೇಶ್ವರಂ ಸಾಪ್ತಾಹಿಕ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು 07.10.2023 ರಿಂದ 30.12.2023 ರವರೆಗೆ ಮುಂದುವರೆಸಲಾಗುತ್ತಿದೆ. ಈ ಮೊದಲು 30.09.2023 ರವರೆಗೆ ಓಡಿಸಲು ಸೂಚಿಸಲಾಗಿತ್ತು. ರಾಮೇಶ್ವರಂನಿಂದ ಪ್ರತಿ ಭಾನುವಾರ ಚಲಿಸುತ್ತಿರುವ ರೈಲು ಸಂಖ್ಯೆ 07356 ರಾಮೇಶ್ವರಂ-ಎಸ್.ಎಸ್.ಎಸ್ ಹುಬ್ಬಳ್ಳಿ ಸಾಪ್ತಾಹಿಕ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು 08.10.23 ರಿಂದ 31.12.23 ರವರೆಗೆ ಮುಂದುವರೆಸಲಾಗುತ್ತಿದೆ. ಈ ಮೊದಲು 01.10.2023 ರವರೆಗೆ ಓಡಿಸಲು ಸೂಚಿಸಲಾಗಿತ್ತು.

**ಹೂಡಿ ನಿಲ್ದಾಣ: ನಿಲುಗಡೆ ಮುಂದುವರಿಕೆ** : ರೈಲುಗಳ ಸಂಖ್ಯೆ 16519/16520 ಕೆ.ಎಸ್.ಆರ್ ಬೆಂಗ ಳೂರು-ಜೋಲಾರಪೇಟೆ-ಕೆ.ಎಸ್.ಆರ್ ಬೆಂಗಳೂರು ಮೆಮು ರೈಲುಗಳಿಗೆ, ಹೂಡಿ ಹಾಲ್ಟ್ ನಿಲ್ದಾಣದಲ್ಲಿನ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ಅಕ್ಟೋಬರ್ 1 ರಿಂದ ಮಾರ್ಚ್ 30, 2024 ರವರೆಗೆ ಮುಂದುವರೆಸಲಾಗುತ್ತಿದೆ.

**ರೈಲು ಮಾರ್ಗ ಬದಲಾವಣೆ** : ವಿಜಯವಾಡ ವಿಭಾಗದ ರೋಲಿಂಗ್ ಕಾರಿಡಾರ್ ಕಾಮಗಾರಿ ಸಲುವಾಗಿ ಸೆಪ್ಟೆಂಬರ್ 28 ರಂದು ಟಾಟಾನಗರದಿಂದ ಹೊರಡುವ ರೈಲು ಸಂಖ್ಯೆ 18111 ಟಾಟಾನಗರ-ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ನಿಡದವೊಲು, ಭೀಮಾವರಂ ಟೌನ್, ಗುಡಿವಾಡ, ವಿಜಯವಾಡ ನಿಲ್ದಾಣಗಳ ಬದಲಾದ ಮಾರ್ಗದ ಮೂಲಕ ಸಂಚರಿಸಲಿದೆ. ಹೀಗಾಗಿ ಏಲೂರು ನಿಲ್ದಾಣದಲ್ಲಿ ನಿಲುಗಡೆ ಇರುವುದಿಲ್ಲ ಎಂದು ಹೆಗಡೆ ವಿವರಿಸಿದ್ದಾರೆ.

# ಆರ್ಯ ಈಡಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ. 26- ಜಿಲ್ಲಾ ಆರ್ಯ ಈಡಿಗರ ಸಂಘ ಹಾಗೂ ಶ್ರೀ ರೇಣುಕಾಂಬ ಕ್ರೆಡಿಟ್ ಕೋ-ಆಪ್ ಸೊಸೈಟಿ ಇವರುಗಳ ಸಂಯುಕ್ತಾಶ್ರಯದಲ್ಲಿ 2022-23ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಡಿಪ್ಲೋಮಾ ಪರೀಕ್ಷೆಯಲ್ಲಿ ಶೇ. 70 ಹಾಗೂ ಅದಕ್ಕೂ ಹೆಚ್ಚಿನ ಅಂಕ ಗಳಿಸಿದ ದಾವಣಗೆರೆ ಜಿಲ್ಲೆಯ ಆರ್ಯ ಈಡಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ದಿ. 15.10.2023 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಅರ್ಜಿಗಳನ್ನು ಎ. ನಾಗರಾಜ್, ಕಾರ್ಯದರ್ಶಿ, ಆರ್ಯ ಈಡಿಗ ಹಾಸ್ಟೆಲ್, ಪಿ.ಬಿ. ರಸ್ತೆ, ದಾವಣಗೆರೆ ಇಲ್ಲಿಗೆ ಕಳುಹಿಸಬಹುದಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುವುದು ಎಂದು ಕಾರ್ಯದರ್ಸಿ ಎ. ನಾಗರಾಜ್ ತಿಳಿಸಿದ್ದಾರೆ. ವಿವರಕ್ಕೆ 88922 66468 ಈ ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

# 1 ರಂದು ರಾಜ್ಯ ಸರ್ಕಾರಿ ನೌಕರರ ವಿಶೇಷ ಸಭೆ

ದಾವಣಗೆರೆ, ಸೆ. 26- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು ಇದರ 2022 ರ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ಅಧ್ಯಕ್ಷತೆಯಲ್ಲಿ ವರ್ಚ್ಯುವಲ್ ವಿಧಾನದ ಮೂಲಕ ಸರ್ವ ಸದಸ್ಯರ ವಿಶೇಷ ಮಹಾಸಭೆಯನ್ನು ಆಯೋಜಿಸಲಾಗಿದೆ.

ಅಕ್ಟೋಬರ್ 1 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳ ಜಿಲ್ಲೆಯ ಹಿರೇಸಿಂದೋಗಿ ರಸ್ತೆಯಲ್ಲಿರುವ ಮಹಾವೀರ ಸಮುದಾಯ ಭವನದಲ್ಲಿ ಸಭೆಯನ್ನು ಏರ್ಪಡಿಸಿದೆ ಎಂದು ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ ತಿಳಿಸಿದ್ದಾರೆ.


**80x120 ಅಡಿ ಅಳತೆಯ 3 ಅಂತಸ್ತಿನ ಕಟ್ಟಡ ಬಾಡಿಗೆಗೆ ಇದೆ**



ದಾವಣಗೆರೆ ನಗರ ನಿಜಲಿಂಗಪ್ಪ ಬಡಾವಣೆಯ ರಿಂಗ್ ರೋಡ್ ಸರ್ಕಲ್ ಹತ್ತಿರ, ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ಡೋರ್ ನಂ. 429, 430ರಲ್ಲಿ 80x120 ಅಡಿ ಅಳತೆಯ 135 ಚದುರಡಿಯ 1ನೇ ಮಹಡಿ, 2ನೇ ಮಹಡಿ, 3ನೇ ಮಹಡಿಯಿರುವ ಬಿಲ್ಡಿಂಗ್ ಖಾಲಿಯಿದ್ದು, ಬಾಡಿಗೆಗೆ ಇದೆ. ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್, ಲಿಫ್ಟ್ ಸೌಲಭ್ಯ ಹೊಂದಿದೆ. ಸಂಪೂರ್ಣ ಕಟ್ಟಡವು ಬ್ಯಾಂಕ್, ಶಾಲೆ, ಕಾಲೇಜು, ಸರ್ಕಾರಿ ಕಛೇರಿ, ಖಾಸಗಿ ಕಛೇರಿ, ವಾಣಿಜ್ಯ ಉದ್ಯಮಗಳಿಗೆ ಬಾಡಿಗೆಗೆ ದೊರೆಯುತ್ತದೆ.

ಸಂಪರ್ಕಿಸಿ : 94480 53519, 82961 18778



**REQUIRED**

**Assistant Manager**

for Davanagere Leading Co-Operative Bank

- *5 to 8 years Experience in Banking Sectors.*
- *M.Com/ CA Intermediate with ERP Tally, GST, Income Tax knowledge.*
- *Good Communication Skill.*
- *Ability to Handle the Operation of the Bank.*

send your Resume to : chandradvg23@gmail.com

**Contact : 95914 97776**


**In the Court of the Hon'Ble 1st Additional Senior Civil Judge at Davangere and Iternary Court at Jagaluru**

**P and SC no : 10. 2023**

Petitioner : Gangamma, W/o Late Rudrappa, Age about 98 years, Senior Citizen, R/o. # 722/B, Old Post Office Road, Neharu Road, Jagaluru Town, Davangere District. - Versus - Respondents : Nil.

**NOTICE UNDR ORDER 5 RULE 20 (1-A) OF CPC**

The above Named Petitioner Applied Petition for getting Succession Certificate in P and SC No. 10/2023, Pending on the 1st Additional Senior Civil Judge and JMFC at Davangere and Iternary Court at Jagaluru, in respect of the deceased R. Rangamma D/o Gangamma and the same the said Petition stand posted to 25 date October. month 2023 for the appearance of the objectors and Objection if any. If no Objection is received by the Court the said petitioner is declaring as successors of deceased R. Rangamma D/o Gangamma and there by issuing the P and SC Certificated in Favour of the Petitioner. Given under my hand and the seal of the court, this 25th day of Sept.. 2023.

Sd/-
Ajay C., Advocate
Davangere. Ph. : 9743019896

By an order of the Court
Sd/- Shirastedar, Principal Senior Civil Judge and CJM Davangere.

## ಓದುಗರ ಪತ್ರ

### ಮದ್ಯ ನಿಷೇಧ ಆರನೇ ಗ್ಯಾರಂಟಿಯಾಗಲಿ

ಮಾನ್ಯರೇ,

ಕರ್ನಾಟಕದಲ್ಲಿ ಹಳ್ಳಿ, ನಗರ, ಪಟ್ಟಣಗಳಲ್ಲಿ ಮತ್ತೆ ಸಾವಿರ ಮದ್ಯದಂಗಡಿ? ಅಬಕಾರಿ ಇಲಾಖೆ ತಯಾರಿ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ನಿಗದಿಪಡಿಸಿರುವ ಗುರಿಯನ್ನು ಮೀರಿ ವರಮಾನ ಸಂಗ್ರಹಕ್ಕೆ ಯೋಜನೆ- ಅಬಕಾರಿ ಸಚಿವರ ಹೇಳಿಕೆ. ವರಮಾನ ಹೆಚ್ಚಿಸುವುದು ಸರ್ಕಾರದ ಕೆಲಸ ಒಳ್ಳೆಯದೇ. ಆದರೆ, ಅರ್ಥ ಶಾಸ್ತ್ರಜ್ಞ ಕೌಟಿಲ್ಯ ಮತ್ತು ಚಾಣಕ್ಯ ನೀತಿಯ ಪ್ರಕಾರ ಯಾವುದೇ ಕಾರಣಕ್ಕೂ ರಾಜ್ಯ ಖಜಾನೆಯನ್ನು ಅನ್ಯಮಾರ್ಗ ಅಥವಾ ದುರ್ಮಾರ್ಗದ ಮೂಲಕ ತುಂಬಬಾರದು.

ಈಗಾಗಲೇ ಯುವಕರು ಮದ್ಯ ವ್ಯಸನದಿಂದ ಹೃದಯರೋಗಗಳಿಂದ ನರಳಿ ಸತ್ತಿದ್ದಾರೆ. ಗಂಡಂದಿರ ಮದ್ಯ ವ್ಯಸನದಿಂದ ಮಹಿಳೆಯರು ವಿಧವೆಯರಾಗಿದ್ದಾರೆ ಮತ್ತು ಆಗುತ್ತಲಿದ್ದಾರೆ. ಮದ್ಯದಂಗಡಿಗಳನ್ನು ಹೆಚ್ಚಿಸಿ, ಕರ್ನಾಟಕ ರಾಜ್ಯವನ್ನು ವಿಧವೆಯರ ಕೊಂಪೆಯನ್ನಾಗಿ ಮಾರ್ಪಡಿಸಬಾರದು. ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಗೆ ಅನ್ನಭಾಗ್ಯ ರಾಮಯ್ಯ ಎಂಬ ಹೆಸರಿದೆ. ಅಬಕಾರಿ ಸಚಿವರು ಮದ್ಯರಾಮಯ್ಯ ಎಂದು ಮಾಡಬಾರದು.

ಖಜಾನೆ ತುಂಬಿಸಲು ಒಳ್ಳೆಯ ಮಾರ್ಗದಿಂದ ಸಂಗ್ರಹಿಸಲಿ. ಶಿಕ್ಷಣ, ಆರೋಗ್ಯ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಶಾಲೆ, ಆಸ್ಪತ್ರೆ, ಕೃಷಿ ಕೇಂದ್ರಗಳನ್ನಾಗಿ ಮಾಡಬೇಕು. ಬದಲಿಯಾಗಿ ಮದ್ಯ, ಸಿಗರೇಟು, ಗುಟುಕಾ ಅಂಗಡಿಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಮಾಡಬಾರದು. ಈ ಒಂದು ಪರಿಕಲ್ಪನೆ ರಾಜ್ಯ ಆಳುವವರಿಗೆ ಇರಬೇಕು.

ಗ್ಯಾರಂಟಿಯಿಂದ ಕುಟುಂಬ ನಿರ್ವಹಣೆಗೆ ಅನುಕೂಲವಾಗಬೇಕು. ಆ ಹಣವನ್ನು ಕಸಿದುಕೊಳ್ಳುವುದರ ಜೊತೆಗೆ ಜನರ ಶಾಂತಿ, ನೆಮ್ಮದಿ ಹಾಳಾಗಬಾರದು. ಮದ್ಯ ವ್ಯಸನದಿಂದ ಕೊಲೆ, ಸುಲಿಗೆ ದರೋಡೆ ಮುಂತಾದವುಗಳ ಪ್ರಮಾಣ ಹೆಚ್ಚಾಗುತ್ತದೆ. ಕಾರಣ ಮುಖ್ಯಮಂತ್ರಿಗಳು ಸಾವಿರ ಮದ್ಯದಂಗಡಿಗಳನ್ನು ಪ್ರಾರಂಭಿಸುವ ಬದಲು ಅವುಗಳನ್ನು ಮುಚ್ಚುವ ಕ್ರಮ ಕೈಗೊಳ್ಳಬೇಕು ಹಾಗೂ ಸಾರಾಯಿ ನಿಷೇಧಿಸಿದರಂತೂ ಸ್ವಾಗತಾರ್ಹ. ಗ್ಯಾರಂಟಿಗಳಿಂದ ಜನರ ಬಾಳು ಹಸನವಾಗುವುದಕ್ಕಿಂತ ಮದ್ಯ ನಿಷೇಧದಿಂದ ಜೀವನ ಹಸನವಾಗುತ್ತದೆ.

- ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ.

# ಪ್ರಧಾನಿ ನರೇಂದ್ರ ಮೋದಿ ದೂರದೃಷ್ಟಿ ವಿಚಾರಗಳಿಂದ ಪ್ರಪಂಚದ ಗಮನವೆಲ್ಲ ಭಾರತದತ್ತ



**ಹರಿಹರದ ಕಾರ್ಯಕ್ರಮದಲ್ಲಿ ಸಂಸದ ಸಿದ್ದೇಶ್ವರ**

ಹರಿಹರ, ಸೆ. 26 - ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ವಿಚಾರಗಳಿಂದ ಪ್ರಪಂಚದ ಗಮನವೆಲ್ಲ ಭಾರತದತ್ತ ಸೆಳೆದಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ಗುರುಭವನದ ಸಭಾಂಗಣದಲ್ಲಿ ಕೇಂದ್ರ ಸಂವಹನ ಇಲಾಖೆ (ಶಿವಮೊಗ್ಗ), ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ (ಹರಿಹರ), ವಾರ್ತಾ ಸಾರ್ವಜನಿಕ ಸಂಪರ್ಕ ಇಲಾಖೆ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಪೋಷಣ ಮಾಸ, ಛಾಯಾಚಿತ್ರ ಪ್ರದರ್ಶನ ಹಾಗೂ ಕೇಂದ್ರ ಸರ್ಕಾರದ 9 ವರ್ಷಗಳ ಸಾಧನೆ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲು ಏರ್ಪಡಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಪ್ರಪಂಚದ 5ನೇ ದೊಡ್ಡ ಆರ್ಥಿಕ ರಾಷ್ಟ್ರವಾಗಿ ಬೆಳೆದಿದೆ. ದೇಶದ ಬೆನ್ನೆಲುಬಾಗಿರುವ ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆ, ಕೃಷಿ ಯೋಜನೆ, ಕಾಶ್ಮೀರ ವಿಧಿ 375 ರದ್ಧತಿ, ತ್ರಿವಳಿ ತಲಾಕ್ ರದ್ದು, ಅಯೋಧ್ಯೆ ರಾಮ ಮಂದಿರ ನಿರ್ಮಾಣ, ನೂತನ ಸಂಸತ್ ಭವನ ಹೀಗೆ ಹಲವಾರು ಯೋಜನೆಗಳ ಮೂಲಕ ಭಾರತದ ಸರ್ವತೋಮುಖ ಬೆಳವಣಿಗೆಯಾಗುತ್ತಿದೆ ಎಂದವರು ಹೇಳಿದರು.

ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಶೇ. 33ರಷ್ಟು ಮೀಸಲಾತಿ, ಬಿಪಿಎಲ್ ಕಾರ್ಡ್‌ದಾರರಿಗೆ ಆಯುಷ್ಮಾನ್ ಯೋಜನೆಯಲ್ಲಿ ಉಚಿತ 5 ಲಕ್ಷದವರೆಗೆ ವೈದ್ಯಕೀಯ ಸೇವೆ, ಜಲಜೀವನ್, ಸ್ವ-ನಿಧಿ ಯೋಜನೆ ಹೀಗೆ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಕೆಲವು ವರ್ಷಗಳಲ್ಲಿ ಪ್ರಪಂಚದಲ್ಲಿಯೇ ಭಾರತ ದೊಡ್ಡಣ್ಣ ಎನಿಸಿಕೊಳ್ಳುವುದರಲ್ಲಿ ಯಾವುದೇ ಅನುಮಾನ ಇಲ್ಲ ಎಂದು ಸಂಸದರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಕೇಂದ್ರ ಸರ್ಕಾರ ಬೇಟಿ ಪಡಾವೋ, ಬೇಟಿ ಬಚಾವೋ, ಮಾತೃವಂದನ ಮುಂತಾದ ಯೋಜನೆಗಳಿಂದ ಮಹಿಳೆಯರಿಗೆ ನೆರವಾಗುತ್ತಿದೆ ಎಂದರು.

ಈ ವೇಳೆ ಗರ್ಭಿಣಿಯರು ಹೇಗಿರಬೇಕು ಮತ್ತು ಬಾಣಂತಿಯರು ಮಕ್ಕಳ ಹಾರೈಕೆ ಹೇಗೆ ಮಾಡಬೇಕೆಂಬ ಬಗ್ಗೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ನಿಂಬಕ್ಕ ಚಂದಪೂರ್, ಸದಸ್ಯೆ ಅಶ್ವಿನಿ ಕೃಷ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಹನುಮಂತಪ್ಪ, ಕೇಂದ್ರ ಸಂವಹನ ಇಲಾಖೆ ಅಧಿಕಾರಿ ಅಕ್ಷತಾ ಸಿ. ಹೆಚ್., ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ. ಪೂರ್ಣಿಮಾ, ಲಕ್ಷ್ಮೀ ಕಾಂತ್ ಶಿವಮೊಗ್ಗ, ಮೇಲ್ವಿಚಾರಕರಾದ ಮಂಜುಳಾ, ಶೈಲಾ ಮೈದುರು, ಲಕ್ಷ್ಮೀ ಮತ್ತಿತರರು ಉಪಸ್ಥಿತರಿದ್ದರು.





## ಲಿಂ. ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯರ ಮೂರ್ತಿಯ ಭವ್ಯ ಮೆರವಣಿಗೆ

ದಾವಣಗೆರೆಯ ಶ್ರೀ ಶೈಲ ಮಠದಲ್ಲಿ ಮಂಗಳವಾರ ಏರ್ಪಾಡಾಗಿದ್ದ ಶ್ರೀಶೈಲ ಜಗದ್ಗುರು ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾ ಸ್ವಾಮೀಜಿಯವರ 37 ನೇ ಪುಣ್ಯಾರಾಧನೆ ಹಾಗೂ ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ 12 ವರ್ಷದ ಸ್ಮರಣೋತ್ಸವದ ನಿಮಿತ್ತ ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ಮೂರ್ತಿಗಳ ಮೆರವಣಿಗೆಯು ರಾಜಬೀದಿಗಳಲ್ಲಿ ಸಂಚರಿಸಿತು. ಶ್ರೀ ಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಕೋಣಂದೂರು ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಮತ್ತಿತರರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮಹಿಳೆಯರು ಕುಂಭ ಹೊತ್ತು ಮೆರವಣಿಗೆಯಲ್ಲಿ ಸಾಗಿದರು.

## ಚೀನಾದಲ್ಲಿ ಉಲ್ಬಣಿಸಿದ ರಿಯಲ್ ಎಸ್ಟೇಟ್ ಸಮಸ್ಯೆ

ನವದೆಹಲಿ, ಸೆ. 26 – ಚೀನಾದ ರಿಯಲ್ ಎಸ್ಟೇಟ್ ವಲಯ ತೀವ್ರ ಬಿಕ್ಕಟ್ಟಿಗೆ ಸಿಲುಕಿದ್ದು, ಎವರ್‌ಗ್ರಾಂಡೆ ಸಮೂಹ ಸಾಲ ಮರುಪಾವತಿಗೆ ವಿಫಲವಾಗಿರುವುದು ಸಮಸ್ಯೆ ಉಲ್ಬಣಿಸುವಂತೆ ಮಾಡಿದೆ.

ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ರಿಯಲ್ ಎಸ್ಟೇಟ್ ವಲಯದ ಸಮಸ್ಯೆಯನ್ನು ಬಗೆಹರಿಸಲು ಒತ್ತು ನೀಡುತ್ತಿದ್ದಾರೆ. ಆದರೆ, ಹಲವಾರು ರಿಯಲ್ ಎಸ್ಟೇಟ್ ಕಂಪನಿಗಳ ಸಮಸ್ಯೆಗಳು ಇನ್ನೂ ತೀವ್ರವಾಗುತ್ತಿವೆ.

ಹಣಕಾಸು ಸಮಸ್ಯೆ ಎದುರಿಸುತ್ತಿರುವುದಾಗಿ ಚೀನಾ ಒಷಿಯನ್‌ವೈಡ್ ಹೋಲ್ಡಿಂಗ್ಸ್ ತಿಳಿಸಿದೆ. ಸಾಲ ಬಾಕಿದಾರನಾಗುವುದನ್ನು ತಪ್ಪಿಸುವ ಪ್ರಯತ್ನದಲ್ಲಿರುವುದಾಗಿ ಕಂಟ್ರಿ ಗಾರ್ಡನ್ ಹೋಲ್ಡಿಂಗ್ಸ್ ತಿಳಿಸಿದೆ.

ಮನೆಗಳ ಬೇಡಿಕೆ ಹೆಚ್ಚಿಸಲು ಚೀನಾ ಸರ್ಕಾರ ಇತ್ತೀಚಿನ ದಿನಗಳಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಂಡಿತ್ತು. ಮುಂಬರುವ ರಜೆ ದಿನಗಳಲ್ಲಿ ಮನೆಗಳ ಬೇಡಿಕೆ ಹೆಚ್ಚಾಗುವ ನಿರೀಕ್ಷೆಯೂ ಇತ್ತು.

ಆದರೆ, ಕಂಪನಿಗಳು ಹಣಕಾಸು ಸಮಸ್ಯೆ ಎದುರಿಸುತ್ತಿರುವುದು ಮಾರುಕಟ್ಟೆಯಲ್ಲಿ ಪರಿಣಾಮ ಬೀರುತ್ತಿದೆ. ಇದರಿಂದಾಗಿ ಸರ್ಕಾರದ ನೀತಿಗಳ ಉದ್ದೇಶಕ್ಕೆ ಸೋಲಾಗಬಹುದು ಎಂದು ಲೂಮಿಸ್ ಸೇಲ್ಸ್ ಇನ್ವೆಸ್ಟ್‌ಮೆಂಟ್ ಏಷಿಯಾ ಸಂಸ್ಥೆಯ ಹಿರಿಯ ವಿಶ್ಲೇಷಕ ಜಿ ವಿ ಫೆಂಗ್ ಹೇಳಿದ್ದಾರೆ.

ಮನೆಗಳನ್ನು ಅಡ ಇಡುವ ಕುರಿತ ನಿಯಮಗಳನ್ನು ಕಳೆದ ಆಗಸ್ಟ್‌ನಲ್ಲಿ ಸಡಿಲಿಸಲಾಗಿತ್ತು. ಇದು ನಗರ ಪ್ರದೇಶಗಳಲ್ಲಿ ಮನೆಗಳ ಮಾರಾಟ ಭರಾಟೆ ಹೆಚ್ಚಿಸಿತ್ತು. ಚೀನಾದಲ್ಲಿ ರಿಯಲ್ ಎಸ್ಟೇಟ್ ವೆಚ್ಚ ಹೆಚ್ಚಾಗಿರುವ ಜೊತೆಗೆ ನಿರುದ್ಯೋಗ ಹಾಗೂ ಕುಸಿಯುತ್ತಿರುವ ಆದಾಯ ಸಮಸ್ಯೆ ಉಲ್ಬಣಿಸುವಂತೆ ಮಾಡಿವೆ. ಮನೆಗಳ ಬೇಡಿಕೆ ಹೆಚ್ಚಿಸುವ ಸಲುವಾಗಿ ಡೆವಲಪರ್‌ಗಳು ಉಚಿತ ಕೊಡುಗೆ ಸೇರಿದಂತೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇಷ್ಟಾದರೂ, ರಿಯಲ್ ಎಸ್ಟೇಟ್ ವಲಯದ ಚೇತರಿಕೆಗೆ ವರ್ಷದ ಸಮಯ ಬೇಕಾಗಲಿದೆ ಎಂದು ಅಂದಾಜಿಸಲಾಗುತ್ತಿದೆ.

## ಮತ್ತೊಂದು ಸಾಲ ಮಿತಿ ಬಿಕ್ಕಟ್ಟಿನಲ್ಲಿ ಅಮೆರಿಕ

ನವದೆಹಲಿ, ಸೆ. 26 – ಅಮೆರಿಕದ ಮತ್ತೊಂದು ಸುತ್ತಿನ ಸಾಲ ಮಿತಿ ಬಿಕ್ಕಟ್ಟಿಗೆ ಸಿಲುಕಿದ್ದು, ಇದು ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಹುದು ಎಂದು ಆರ್ಥಿಕ ಶ್ರೇಯಾಂಕ ಸಂಸ್ಥೆಯಾದ ಮೂಡಿಸ್ ತಿಳಿಸಿದೆ.

ಸರ್ಕಾರ ಮಾಡುವ ವೆಚ್ಚದ ಮಿತಿಗೆ ಸಂಬಂಧಿಸಿದಂತೆ ಶಾಸಕರು ಒಮ್ಮತಕ್ಕೆ ಬರಬೇಕಿದೆ. ಇಲ್ಲವಾದರೆ ಅಕ್ಟೋಬರ್ 1ರಿಂದ ಅಮೆರಿಕ ಸರ್ಕಾರ ಖರ್ಚು ಮಾಡಲು ಹಣವಿಲ್ಲದಂತಾಗಲಿದೆ. ಇದರಿಂದಾಗಿ ಹಲವಾರು ಸೇವೆಗಳಲ್ಲಿ ವ್ಯತ್ಯಯವಾಗಲಿದೆ.

ವೆಚ್ಚ ಮಿತಿಯನ್ನು ಹೆಚ್ಚಿಸಲು ಅಮೆರಿಕದ ಶಾಸನ ಸಭೆಗಳ ಒಪ್ಪಿಗೆ ಪಡೆಯಲು ಜೋ ಬಿಡನ್ ನೇತೃತ್ವದದ ಸರ್ಕಾರಕ್ಕೆ ಕೆಲವೇ ದಿನಗಳ ಗಡುವು ಉಳಿದಿದೆ.

ಡೆಮಾಕ್ರಾಟ್‌ಗಳು ಸೆನೆಟ್ ನಿಯಂತ್ರಿಸುತ್ತಿದ್ದರೆ, ರಿಪಬ್ಲಿಕನ್ ಪಕ್ಷದವರು ಜನಪ್ರತಿನಿಧಿಗಳ ಸದನ ನಿಯಂತ್ರಿಸುತ್ತಿದ್ದಾರೆ. ಇದು ಹಣಕಾಸು ಮಸೂದೆಗೆ ಅಂಗೀಕಾರ ಪಡೆಯಲು ತೊಡಕಾಗಲಿದೆ.

ಅಮೆರಿಕ ಈ ಹಿಂದೆಯೂ ಸಾಲ ಮಿತಿ ಬಿಕ್ಕಟ್ಟು ಎದುರಿಸಿತ್ತು. ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವಧಿಯಲ್ಲಿ ಮೂರು ಬಾರಿ ಸಾಲ ಮಿತಿಯ ಕಾರಣದಿಂದ ಸರ್ಕಾರ ಸ್ಥಗಿತಗೊಂಡಿತ್ತು.

## ಸತತ ನೀರು ಹರಿಸಲು ಒತ್ತಾಯ ಉಸ್ತುವಾರಿ ಸಚಿವರಿಗೆ ಮನವಿ



ದಾವಣಗೆರೆ, ಸೆ. 26- ಭದ್ರಾ ಬಲದಂಡೆ ನಾಲೆಯಲ್ಲಿ ಆನ್ ಅಂಡ್ ಆಫ್ ಮಾಡದೆ ಸತತವಾಗಿ ಒಟ್ಟು 100 ದಿವಸ ನೀರು ಹರಿಸುವಂತೆ ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ ಮತ್ತು ಮಲೇಬೆನ್ನೂರಿನ ರೈತ ಮುಖಂಡ ಮುದೇಗೌಡ್ರ ತಿಪ್ಪೇಶ್ ಒತ್ತಾಯಿಸಿದ್ದಾರೆ.

ಮುಂದೆ ಭತ್ತದ ಬೆಳೆ ಕಾಳು ಕಟ್ಟುವ ಹಂತ ಇರುವುದರಿಂದ ನಾಲೆಯಲ್ಲಿ ಮತ್ತೆ 10 ದಿನ ನೀರು ನಿಲ್ಲಿಸಿದರೆ ರೈತರಿಗೆ ಬಹಳ ತೊಂದರೆ ಆಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಏತನ್ಮಧ್ಯೆ ಯಲವಟ್ಟಿಯ ಡಿ.ಹೆಚ್. ಚನ್ನಬಸಪ್ಪ, ಡಿ. ಹೆಚ್. ಮಹೇಂದ್ರಪ್ಪ, ಹೆಚ್. ಶಾಂತವೀರಪ್ಪ, ಕೆ. ಚನ್ನಬಸಪ್ಪ, ಎಂ. ಸಿದ್ದೇಶ್, ಹೊಳೆಸಿರಿಗೆರೆಯ ಎಂ. ಪ್ರಭು ಮತ್ತಿತರೆ ರೈತರು ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ ಭದ್ರಾ ಬಲದಂಡೆ ನಾಲೆಯಲ್ಲಿ ಇನ್ಮುಂದೆ ಆಫ್ - ಆನ್ ಪದ್ಧತಿ ಮಾಡದೇ ಸತತವಾಗಿ ನೀರು ಹರಿಸುವಂತೆ ಮನವಿ ಮಾಡಿದ್ದಾರೆ. ರೈತರ ಮನವಿಗೆ ಸ್ಪಂದಿಸಿದ ಮಲ್ಲಿಕಾರ್ಜುನ್ ಅವರು ಈ ಬಗ್ಗೆ ಮುಂದೆ ನಡೆಯುವ ಭದ್ರಾ ಐಸಿಸಿ ಸಭೆಯಲ್ಲಿ ನಾವೆಲ್ಲರೂ ಸೇರಿ ಒತ್ತಾಯಿಸುತ್ತೇವೆ ಎಂದು ಭರವಸೆ ನೀಡಿದರು.

## ಅಂಬಾಭವಾನಿ ಬ್ಯಾಂಕ್ ವೃತ್ತಿಪರ ನಿರ್ದೇಶಕರಾಗಿ ರಾಘವೇಂದ್ರ



ದಾವಣಗೆರೆ, ಸೆ. 26-ನಗರ ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ವೃತ್ತಿ ಪರ ನಿರ್ದೇಶಕರಾಗಿ ವಕೀಲ ಎ.ಸಿ. ರಾಘವೇಂದ್ರ ಮೊಹರೆ ನೇಮಕಗೊಂಡಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ಕಳೆದ ವಾರ ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಈ ನೇಮಕ ಮಾಡಲಾಯಿತು ಎಂದು ಬ್ಯಾಂಕಿನ ಅಧ್ಯಕ್ಷ ಗೋಪಾಲರ್‌ರಾವ್ ಮಾನೆ ತಿಳಿಸಿದ್ದಾರೆ.



### ಮನೆಮನೆಗೆ ಜೋಕುರಾಸ್ವಾಮಿ

ಮಲೇಬೆನ್ನೂರು, ಸೆ. 26 - ಹೊಳೆಸಿರಿಗೆರೆ ಗ್ರಾಮದಲ್ಲಿ ಮಹಿಳೆಯರು ಜೋಕುಮಾರನ ಮಣ್ಣಿನ ಮೂರ್ತಿಯನ್ನು ಬೇವಿನ ಸೊಪ್ಪನ್ನು ತುಂಬಿದ ಬುಟ್ಟಿಯಲ್ಲಿ ಇಟ್ಟುಕೊಂಡು ಮನೆ ಮನೆಗೆ ಹೋಗಿ ಜೋಕುಮಾರನ ಹಾಡುಗಳನ್ನು ಹಾಡುತ್ತಾ ಧವಸ ಧಾನ್ಯ ಪಡೆದರು.

## ಆರೋಗ್ಯದತ್ತ ಇರಲಿ ವಿದ್ಯಾರ್ಥಿಗಳ ಚಿತ್ತ



### ದವನ-ನೂತನ ಕಾಲೇಜಿನ ಕಾರ್ಯಕ್ರಮದಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್

ದಾವಣಗೆರೆ, ಸೆ. 26 - ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಆರೋಗ್ಯದ ಕಡೆ ಹೆಚ್ಚು ಗಮನಹರಿಸಬೇಕಾದ ಅಗತ್ಯವಿದೆ. ಇಂದಿನ ಒತ್ತಡ ಮತ್ತು ಅತಿಯಾದ ಮೊಬೈಲ್ ಬಳಕೆಯಿಂದ ಅನೇಕರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಆರೋಗ್ಯಕರ ಜೀವನ ಶೈಲಿಯನ್ನು ರೂಢಿಸಿಕೊಳ್ಳುವಂತೆ ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರೂ, ಎಸ್.ಎಸ್. ಕೇರ್ ಟ್ರಸ್ಟ್‌ನ ಆಜೀವ ಟ್ರಸ್ಟಿಯೂ ಆಗಿರುವ ಡಾ.ಪ್ರಭಾ ಮಲ್ಲಿಕಾರ್ಜುನ್ ಕಿವಿಮಾತು ಹೇಳಿದರು.

ನಗರದ ಬಾಪೂಜಿ ಸಮುದಾಯ ಭವನದಲ್ಲಿ ದವನ-ನೂತನ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ಶೈಕ್ಷಣಿಕ ವರ್ಷದ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಎಸ್.ಎಸ್. ಕೇರ್ ಟ್ರಸ್ಟ್ 'ಪ್ರತಿಜ್ಞಾ' ರಕ್ತದಾನ ಜಾಗೃತಿ ಕಾರ್ಯಕ್ರಮದ ಮೂಲಕ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿ ಯುವ ಜನರಿಗೆ ರಕ್ತದಾನದ ಮಹತ್ವ ಕುರಿತು ಜಾಗೃತಿ ಮೂಡಿಸುತ್ತಾ ಬಂದಿದೆ. ಅಪೌಷ್ಟಿಕತೆಯಿಂದ ನರಳುತ್ತಿರುವ ಗರ್ಭಿಣಿಯರು, ಬಾಣಂತಿಯರು ಸೇರಿದಂತೆ ಇತರರಿಗೆ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ರಕ್ತದಾನದ ಅಗತ್ಯತೆ, ಪ್ರಯೋಜನಗಳು, ರಕ್ತದಾನದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ನೈಜ ಸಂಗತಿಗಳನ್ನು ತಿಳಿಸುವ ಉದ್ದೇಶವನ್ನು ಹೊಂದಲಾಗಿದೆ. ಯುವಕರಿಗೆ ಶಿಕ್ಷಣದ ಜೊತೆಗೆ ಆಜೀವ ರಕ್ತದಾನಿಗಳಾಗಲು ಪ್ರೇರೇಪಿಸಲಾಗುವುದು ಎಂದು ತಿಳಿಸಿದರು.

ಅಮೂಲ್ಯವಾದ ಒಂದು ಯೂನಿಟ್ ರಕ್ತದಿಂದ ನಾಲ್ಕು ಜೀವಗಳನ್ನು ಉಳಿಸಬಹುದು. ಯುವಜನರು ಸ್ವಯಂಪ್ರೇರಣೆಯಿಂದ ರಕ್ತದಾನಕ್ಕೆ ಮುಂದಾಗಬೇಕು. ವಿದ್ಯಾರ್ಥಿಗಳು ಸತತ ಪರಿಶ್ರಮ, ಪೋಷಕರ ಪ್ರೋತ್ಸಾಹ ಹಾಗೂ ಶಿಕ್ಷಕರ ಮಾರ್ಗದರ್ಶನದಿಂದ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯವಿದೆ. ವಿದ್ಯಾಭ್ಯಾಸದ ಜೊತೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಹಿತ ನುಡಿದರು.

ದವನ - ನೂತನ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಸಂಸ್ಥೆ ಗುಣಮಟ್ಟದ ಶಿಕ್ಷಣ ನೀಡುತ್ತಾ ಬಂದಿದ್ದು, ದಾವಣಗೆರೆ ವಿವಿಯಲ್ಲಿ ಅತಿ ಹೆಚ್ಚು ರ್‍ಯಾಂಕ್ ಪಡೆದ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ನೂತನ ಎಜುಕೇಶನ್ ಅಸೋಸಿಯೇಷನ್ ಅಧ್ಯಕ್ಷ ಎನ್. ಪರಶುರಾಮನಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದವನ್ ಕಾಲೇಜಿನ ಸಹ ಕಾರ್ಯದರ್ಶಿ ಜಿ.ಎಸ್. ಅಂಜು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದರು. ನಿರ್ದೇಶಕ ಹರ್ಷರಾಜ್ ಎ. ಗುಜ್ಜರ್, ಖಜಾಂಚಿ ವಾಣಿ ಮಠಪತಿ, ಉಪ ಪ್ರಾಂಶುಪಾಲರಾದ ಎನ್. ಅನಿತಾ , ಪ್ರೊ. ಕೆ.ಕೊಟ್ರಪ್ಪ ಹಾಗೂ ಬಂಗಾರದ ಪದಕಕ್ಕೆ ಪಾತ್ರರಾದ ಹನ್ನೊಂದು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆರ್.ವೈ. ಶಿಲ್ಪಾ ಸ್ವಾಗತಿಸಿದರು. ಬಿ.ಕೆ. ಕರೀಷ್ಮಾ, ಎಸ್. ನಯನ ನಿರೂಪಿಸಿದರು. ಸಿರಾಜ್ ಉನ್ನೀಸಾ ವಂದಿಸಿದರು. ಎಂ. ಗೌರಿ ಮತ್ತು ತಂಡದವರು ಭರತ ನಾಟ್ಯ ಪ್ರದರ್ಶಿಸಿದರು.

## ಸಾಸ್ವೆಹಳ್ಳಿ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾಲ್ಲೂಕಿನ ಸಾಸ್ವೇಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹಳ್ಳಿಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಅಯೋಧ್ಯೆ : ಜನವರಿ 22ರಂದು ಮೂರ್ತಿ ಪ್ರತಿಷ್ಠಾಪನೆ ನಿರೀಕ್ಷೆ

ನವದೆಹಲಿ, ಸೆ. 26 – ಅಯೋಧ್ಯೆ ರಾಮ ಮಂದಿರದ ನೆಲಮಹಡಿ ಹಂತದ ನಿರ್ಮಾಣ ಡಿಸೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದೆ. ಜನವರಿ 22ರಂದು ಮೂರ್ತಿ ಪ್ರತಿಷ್ಠಾಪನೆ ನೆರವೇ ರುವ ನಿರೀಕ್ಷೆ ಇದೆ ಎಂದು ದೇವಾಲಯ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರ ತಿಳಿಸಿದ್ದಾರೆ.

ಜನವರಿ 20-24ರ ನಡುವೆ ನಡೆಯಲಿರುವ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಅಂತಿಮ ದಿನಾಂಕವನ್ನು ಇನ್ನೂ ಪ್ರಧಾನಿಗೆ ತಿಳಿಸಿಲ್ಲ ಎಂದವರು ಹೇಳಿದ್ದಾರೆ. ಪ್ರತಿ ವರ್ಷ ರಾಮನವಮಿಯ ವೇಳೆ ಸೂರ್ಯನ ಕಿರಣಗಳು ಸ್ವಲ್ಪ ಕಾಲ ದೇವರ ಮೂರ್ತಿಯ ಹಣೆಯ ಮೇಲೆ ಮೂಡುವಂತೆ ಶಿಖರ ನಿರ್ಮಿಸಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ. ಈ ಯೋಜನೆಗಾಗಿ ರೂರ್ಕಿಯ ಸೆಂಟ್ರಲ್ ಬಿಲ್ಡಿಂಗ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಹಾಗೂ ಪುಣೆಯ ಸಂಸ್ಥೆಯೊಂದು ಜಂಟಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ಇದರ ವಿನ್ಯಾಸ ರೂಪಿಸಲಾಗುತ್ತಿದೆ ಎಂದು ಮಿಶ್ರ ಹೇಳಿದ್ದಾರೆ.




## ಸಮಯ ಸದುಪಯೋಗ ಮಾಡಿಕೊಂಡು ಪರೀಕ್ಷೆಯಲ್ಲಿ ಹೆಚ್ಚಿನ ಯಶಸ್ಸು ಸಾಧಿಸಿ




### ರಾಣೇಬೆನ್ನೂರಿನ ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಪ್ರಕಾಶಾನಂದಜೀ ಮಹಾರಾಜ್ ಕಿವಿಮಾತು

ರಾಣೇಬೆನ್ನೂರು, ಸೆ. 25- ವಿದ್ಯಾರ್ಥಿಗಳು ಜೀವನದಲ್ಲಿ ಕಷ್ಟಪಟ್ಟರೆ ಸುಖದ ಹೆಬ್ಬಾಗಿಲು ತಾನೇ ತೆರೆದುಕೊಳ್ಳುತ್ತದೆ. ಇರುವ ಕಡಿಮೆ ಸಮಯದಲ್ಲಿ ಓದು - ಬರಹಕ್ಕೆ ಒತ್ತು ನೀಡಿ, ಸಮಯದ ಸದುಪಯೋಗ ಮಾಡಿಕೊಂಡು ಪರೀಕ್ಷೆಯಲ್ಲಿ ಹೆಚ್ಚಿನ ಯಶಸ್ಸು ಸಾಧಿಸಿರಿ ಎಂದು ರಾಣೇಬೆನ್ನೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಪ್ರಕಾಶಾನಂದಜೀ ಮಹಾರಾಜ್ ಹೇಳಿದರು.

ಸುಮಾರು 43 ವರ್ಷಗಳಿಂದ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ನಗರದ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಜ್ಯೋತಿ ಬೆಳಗಿಸಿ ಅವರು ಮಾತನಾಡುತ್ತಿದ್ದರು. ಇದೀಗ ಹಚ್ಚಿದ ಈ ಜ್ಯೋತಿ ನಿಮ್ಮ ಜ್ಞಾನದ ಬೆಳಕನ್ನು ಪಸರಿಸುವಂತಹದ್ದು. ಅಷ್ಟ ದಿಕ್ಕುಗಳಲ್ಲಿ ಬೆಳಕನ್ನು ಬೀರಿದಂತೆ ನಿಮ್ಮ ಪ್ರತಿಭೆ ಬೆಳಗಲಿ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಶಿವಕುಮಾರ ಬಿ. ಮಾತನಾಡಿ, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ನಿಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಿ. ಹಾಗೆಯೇ ನಿಮ್ಮ ಮುಂದಿನ ಜೀವನ ಸುಖ, ನೆಮ್ಮದಿಯಿಂದ ಕೂಡಿರಲಿ ಎಂದರು.

ಡೀನ್ ಅಕ್ಯಾಡೆಮಿಕ್ ಡಾ.ಎಸ್.ಎಫ್. ಕೊಡದ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಭಾಗದ ಮುಖ್ಯಸ್ಥರಾದ ಪ್ರೊ.ಸಿ.ಎಂ.ಪರಮೇಶ್ವರಪ್ಪ, ಡಾ.ಎಸ್. ಜಿ. ಮಾಕನೂರು, ಡಾ.ಬಿ.ಮಹೇಶ್ವರಪ್ಪ , ಡಾ.ಜೆ. ಓ. ಕಿರಣ್ , ಪ್ರೊ. ಜಗನ್ನಾಥ್ , ಡಾ.ಡಿ.ಎಸ್. ವಿಶ್ವನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಶ್ರೀನಿಧಿ ಬಾಳಿಗರ್ ಪ್ರಾರ್ಥನೆ ಮಾಡಿದರು. ಡಾ.ಎಂ.ಇ.ಶಿವಕುಮಾರ ಹೊನ್ನಾಳಿ ಸ್ವಾಗತಿಸಿದರು. ಪ್ರೊ. ಎಸ್. ವಿಶ್ವನಾಥ್ ವಂದಿಸಿದರು. ಪ್ರೊ.ಎಸ್. ಪಿ.ಭಾವನಾ ಕಾರ್ಯಕ್ರಮ ನಿರೂಪಿಸಿದರು.

## ಪಾಕ್ : ಸಿಪಿಇಸಿ ಯೋಜನೆ ಸಹಕಾರ ವಿಸ್ತರಣೆಗೆ ಚೀನಾ ನಕಾರ

ಇಸ್ಲಾಮಾಬಾದ್, ಸೆ. 26 – ಚೀನಾ ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿ.ಪಿ.ಇ.ಸಿ.) ಯೋಜನೆಯ ಇಂಧನ, ಜಲ ನಿರ್ವಹಣೆ ಹಾಗೂ ಪರಿಸರ ಬದಲಾವಣೆ ವಲಯಗಳಲ್ಲಿ ಸಹಕಾರವನ್ನು ಇನ್ನಷ್ಟು ವಿಸ್ತರಿಸಲು ಚೀನಾ ನಿರಾಕರಿಸಿದೆ.

60 ಶತಕೋಟಿ ಡಾಲರ್ ವೆಚ್ಚದಲ್ಲಿ ಸಿ.ಪಿ.ಇ.ಸಿ. ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಈ ಯೋಜನೆಯಲ್ಲಿ ಸಹಕಾರ ವಿಸ್ತರಿಸಲು ಚೀನಾ ನಿರಾಕರಿಸಿರುವುದು, ಉಭಯ ದೇಶಗಳ ಸಂಬಂಧಗಳ ಮೇಲೆ ಒತ್ತಡ ಇರುವುದನ್ನು ತೋರಿಸುತ್ತಿದೆ.

